ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ ವಾರ್ತಾಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ
ಪ್ರಕಟಣೆ

ಸಂಪುಟ : 2 । ಸಂಚಿಕೆ : 11 | ಜನವರಿ : 2021 | ಪುಟಗಳು : 20 । ಬೆಲೆ : 25/–

## ರಾಜ್ಯದ ಸಮಸ್ತ ಸಹಕಾರಿ ಬಂಧುಗಳಿಗೆ
## 2021ರ ನೂತನ ವರ್ಷದ ಹಾರ್ದಿಕ ಶುಭಾಶಯಗಳು
## ಮತ್ತು ಮಕರ ಸಂಕ್ರಾಂತಿ ಹಾಗೂ
## 71ನೇ ಗಣರಾಜ್ಯೋತ್ಸವದ ಶುಭಾಶಯಗಳು








ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು

ಆಡಳಿತ ಮಂಡಳಿ ಸದಸ್ಯರುಗಳು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು.





# ಸಹಕಾರ ರತ್ನ ಪುರಸ್ಕೃತ ಪತ್ತಿನ ಮಹಾಮಂಡಳದ ಅಧ್ಯಕ್ಷೆ ಶ್ರೀಮತಿ ಕೆ.ಲಲಿತ ಜಿ.ಟಿ. ದೇವೇಗೌಡರಿಗೆ ಅಭಿನಂದನೆ ಸಲ್ಲಿಕೆ



ಸಹಕಾರ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಂಯುಕ್ತಾಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆದ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನಾ ಸಮಾರಂಭದಲ್ಲಿ ಸಹಕಾರ ರತ್ನ ಪುರಸ್ಕೃತರಾದ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ ಅವರನ್ನು ಪತ್ತಿನ ಮಹಾಮಂಡಳದ ಆಡಳಿತಮಂಡಳಿ ಸಭೆಯಲ್ಲಿ ನಿರ್ದೇಶಕ ಮಂಡಳಿ ಸದಸ್ಯರು ಆತ್ಮೀಯವಾಗಿ ಸನ್ಮಾನಿಸಿ, ಅಭಿನಂದಿಸಿ, ಗೌರವಿಸಿದರು.

---

# ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದಿಂದ ಪತ್ತಿನ ಮಹಾಮಂಡಳಕ್ಕೆ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ಸಲ್ಲಿಕೆ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್.ಎನ್.ಅರುಣ್‌ಕುಮಾರ್‌ರವರು ಮಹಾಮಂಡಳದ ಪರವಾಗಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳಕ್ಕೆ ಕಟ್ಟಡ ನಿರ್ಮಾಣಕ್ಕೆ ದೇಣಿಗೆಯಾಗಿ ರೂ.25,00,000/– (ಇಪ್ಪತ್ತೈದು ಲಕ್ಷ)ಗಳ ಚೆಕ್ಕನ್ನು ಪತ್ತಿನ ಮಹಾಮಂಡಳ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ ರವರಿಗೆ ನೀಡಿದರು. ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಶ್ರೀಮತಿ ಆಶಾಲತಾ ಪಿ. ಉಪಸ್ಥಿತರಿದ್ದರು.

# ಇ-ಸ್ಟಾಂಪಿಂಗ್ ಕೇಂದ್ರಕ್ಕೆ ಉಪನಿಬಂಧಕರ ಭೇಟಿ



ಸಮನ್ವಯ ವಿವಿಧೋದ್ದೇಶ ಸಹಕಾರ ಸಂಘ ನಿ., ಜೇವರ್ಗಿ, ಕಲಬುರಗಿ ಜಿಲ್ಲೆ ಈ ಸಹಕಾರ ಸಂಘದ ಕಲಬುರಗಿ ಶಾಖೆಯ ಇ-ಸ್ಟಾಂಪಿಂಗ್ ಕೇಂದ್ರಕ್ಕೆ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಸಿ.ಎಸ್. ನಿಂಬಾಳ ಹಾಗೂ ಸಹಾಯಕ ನಿಬಂಧಕರಾದ ಶ್ರೀ ಸೈಯದ್ ಖುದ್ದೂಸ್ ರವರು ಭೇಟಿ ನೀಡಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಸ್.ಕೋಬಾಳ ಹಾಗೂ ಸಂಘದ ಸಿಬ್ಬಂದಿ ಉಪಸ್ಥಿತರಿದ್ದರು.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ-ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KA/BGW-1816/2019-2021
POSTING DATE : 1 & 5TH EVERY MONTH
POSTED AT : P/C RMS BHAVAN, BANGALORE PSO, Blore-26
PUBLISHED ON : 29TH of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಲಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

Printed at : Biligiri Printers
Chamrajpet, Bengaluru - 18.

## ಸಂಪಾದಕರ ನುಡಿ



ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

> ಸಹಕಾರ ಸಂಘ/ ಬ್ಯಾಂಕುಗಳು ಆರ್ಥಿಕವಾಗಿ ಚೇತರಿಸಿಕೊಳ್ಳದಿದ್ದರೆ ಅವುಗಳ ಅಸ್ತಿತ್ವದ ಬಗ್ಗೆಯೂ ಚಿಂತಿಸಬೇಕಾಗುತ್ತದೆ. ಸಹಕಾರ ಸಂಘಗಳ ಸಿಬ್ಬಂದಿಗಳು ಕೂಡ ಹೆಚ್ಚು ಬದ್ಧತೆ ಪ್ರದರ್ಶಿಸಬೇಕಾಗಿದೆ. ಸಾಲ ವಸೂಲಾತಿಗೆ ಹೆಚ್ಚು ಆದ್ಯತೆ ನೀಡಬೇಕಾಗಿದೆ. 2021-22ರ ಸಾಲಿನ ಕಾರ್ಯಕ್ರಮಗಳತ್ತ ಗಮನ ಹರಿಸಬೇಕಾಗುತ್ತದೆ. ನಿರಂತರ ಆರ್ಥಿಕ ಚಟುವಟಿಕೆಗಳಿಗಾಗಿ ಬದ್ಧತೆ ದಕ್ಷತೆಗೆ ಒತ್ತು ನೀಡಿ ಅನುತ್ಪಾದಕ ಅಸ್ತಿ ಪ್ರಮಾಣವನ್ನು ಕನಿಷ್ಠಗೊಳಿಸಬೇಕಾಗುತ್ತದೆ.

# ನೂತನ ವರ್ಷ–2021
# ಸ್ವಾವಲಂಬನೆಗೆ ಒತ್ತು ನೀಡಬೇಕಾದ ಅಗತ್ಯತೆ

2020ರ ವರ್ಷ ಮುಗಿದಿದೆ. ಕೋವಿಡ್–19ರ ವಿಶ್ವ ಮಹಾಮಾರಿಯಿಂದ ಜಗತ್ತು ತಲ್ಲಣಿಸಿದ್ದರಿಂದ ವಿಶ್ವದ ಆರ್ಥಿಕತೆಗೆ ಪೆಟ್ಟು ಬಿದ್ದಿತ್ತು. ಕೋಟ್ಯಂತರ ಉದ್ಯೋಗಗಳು ಕೂಡ ನಷ್ಟವಾಗಿದೆ. ಅಭಿವೃದ್ಧಿ ಕಾರ್ಯಗಳಿಗೆ ಹಣವೇ ಪ್ರಾಮುಖ್ಯತೆಯನ್ನು ಪಡೆದಿರುವಾಗ ಪ್ರತಿಯೊಬ್ಬರೂ ಆರ್ಥಿಕ ಸ್ವಾವಲಂಬನೆ ಸಾಧಿಸಲು ಹಣದ ಅಗತ್ಯಕ್ಕೆ ತಕ್ಕಂತೆ ಸ್ವಯಂ ದುಡಿಮೆ ದಾರಿದೀಪವಾಗುತ್ತದೆ.

2021ರ ವರ್ಷಕ್ಕೆ ನಾವೀಗ ಕಾಲಿರಿಸಿದ್ದೇವೆ. ನಮ್ಮ ಮುಂದೆ ಅನೇಕ ಸವಾಲುಗಳಿವೆ. ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರು ದೇಶ ನಿರ್ಮಾಣ ಕಾರ್ಯದಲ್ಲಿ ಸ್ವದೇಶಿ ಉತ್ಪಾದನೆಯ ಮೂಲಕ ದೇಶ ಸ್ವಾವಲಂಬನೆ ಸಾಧಿಸಿಕೊಳ್ಳಲು ಕರೆ ನೀಡಿರುತ್ತಾರೆ. ಹೌದು. ನಮ್ಮೆಲ್ಲರ ಭವಿಷ್ಯದ ದೃಷ್ಟಿಕೋನವೂ ಇದೇ ಆಗಿದೆ. ಪ್ರತಿಯೊಬ್ಬ ನಾಗರೀಕರು ದುಡಿಮೆಯ ಮೂಲಕ ಅಭಿವೃದ್ಧಿ ಕಾರ್ಯಗಳಲ್ಲಿ ಕೈಜೋಡಿಸಬೇಕಾಗಿದೆ. ವ್ಯಾಪಾರ ವಹಿವಾಟು ಹೆಚ್ಚಿದಂತೆಲ್ಲಾ ಉದ್ಯೋಗ ಸೃಷ್ಟಿ, ಆರ್ಥಿಕ ಸದೃಢತೆ, ಸಾಮಾಜಿಕ ಜವಾಬ್ದಾರಿಗಳನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಮುನ್ನಡೆಯಬೇಕಾಗಿದೆ.

ಇದೇ ನಿಟ್ಟಿನಲ್ಲಿ ಸಹಕಾರ ಸಂಘಗಳ ಪಾತ್ರವೂ ಪ್ರಮುಖವಾದುದಾಗಿದೆ. ಕೋವಿಡ್–19ರ ಕಾರಣಗಳಿಂದ 2020–21ನೇ ಸಾಲಿನಲ್ಲಿ ಸಂಘಗಳ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡಿದ್ದವು. ಈಗ ಚೇತರಿಕೆ ಕಾಣುತ್ತಿವೆ. ಈಗಾಗಲೇ ಕಳೆದ ವರ್ಷದ ಡಿಸೆಂಬರ್ 25ರ ಒಳಗೆ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳು ಮುಗಿದಿವೆ. ಲಾಭ–ನಷ್ಟಗಳ ಬಗ್ಗೆ ಅವಲೋಕನ ನಡೆಸಿ ಮುಂದಿನ ವರ್ಷದ ಭವಿಷ್ಯದ ಯೋಜನೆಗಳ ಬಗ್ಗೆಯು ಚರ್ಚಿಸಿ ತೀರ್ಮಾನಿಸಲಾಗಿರುತ್ತದೆ.

ಸಹಕಾರ ಸಂಘ/ ಬ್ಯಾಂಕುಗಳು ಆರ್ಥಿಕವಾಗಿ ಚೇತರಿಸಿಕೊಳ್ಳದಿದ್ದರೆ ಅವುಗಳ ಅಸ್ತಿತ್ವದ ಬಗ್ಗೆಯೂ ಚಿಂತಿಸಬೇಕಾಗುತ್ತದೆ. ಸಹಕಾರ ಸಂಘಗಳ ಸಿಬ್ಬಂದಿಗಳು ಕೂಡ ಹೆಚ್ಚು ಬದ್ಧತೆ ಪ್ರದರ್ಶಿಸಬೇಕಾಗಿದೆ. ಸಾಲ ವಸೂಲಾತಿಗೆ ಹೆಚ್ಚು ಆದ್ಯತೆ ನೀಡಬೇಕಾಗಿದೆ. 2021–22ರ ಸಾಲಿನ ಕಾರ್ಯಕ್ರಮಗಳತ್ತ ಗಮನ ಹರಿಸಬೇಕಾಗುತ್ತದೆ. ನಿರಂತರ ಆರ್ಥಿಕ ಚಟುವಟಿಕೆಗಳಿಗಾಗಿ ಬದ್ಧತೆ ದಕ್ಷತೆಗೆ ಒತ್ತು ನೀಡಿ ಅನುತ್ಪಾದಕ ಅಸ್ತಿ ಪ್ರಮಾಣವನ್ನು ಕನಿಷ್ಠಗೊಳಿಸಬೇಕಾಗುತ್ತದೆ. ಅಗ ಮಾತ್ರ ಸಹಕಾರ ಸಂಘಗಳು ಪರಿಣಾಮಕಾರಿ ಸೇವೆಯ ಜೊತೆಗೆ ಆರ್ಥಿಕ ಸದೃಢತೆ ಕಂಡುಕೊಳ್ಳಲು ಸಾಧ್ಯವೆನಿಸುತ್ತದೆ.

**ರಾಜ್ಯದ ಸಮಸ್ತ ಸಹಕಾರಿ ಬಂಧುಗಳಿಗೆ 2021ನೇ ನೂತನ ವರ್ಷ, ಸಂಕ್ರಾಂತಿ ಹಾಗೂ ಗಣರಾಜ್ಯೋತ್ಸವ ಶುಭಾಶಯಗಳು.**

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# 50 ಲಕ್ಷ ಮೀರಿ ಟರ್ನ್ ಓವರ್ ಇರುವ ಉದ್ಯಮಗಳ GST ಪಾವತಿ ನಿಯಮದಲ್ಲಿ ಬದಲಾವಣೆ




**ನವದೆಹಲಿ :** ಮಾಸಿಕ 50 ಲಕ್ಷ ರೂ.ಗಳನ್ನು ವಹಿವಾಟು ಮೀರಿದ ಉದ್ಯಮಗಳು ತಮ್ಮ ಪಾಲಿನ ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಕನಿಷ್ಠ 1%ರಷ್ಟಾದರೂ ನಗದಿನ ರೂಪದಲ್ಲಿ ಪಾವತಿ ಮಾಡಬೇಕಾಗಿದೆ.

ಈ ಕ್ರಮದ ಮೂಲಕ ಸುಳ್ಳು ಬಿಲ್‌ಗಳನ್ನು ಸೃಷ್ಟಿಸುವ ಕೆಲಸಕ್ಕೆ ಕಡಿವಾಣ ಹಾಕುವ ಉದ್ದೇಶವನ್ನು ವಿತ್ತ ಸಚಿವಾಲಯ ಇಟ್ಟುಕೊಂಡಿದೆ. ಈ ಸಂಬಂಧ ಕೇಂದ್ರ ಪರೋಕ್ಷ ತೆರಿಗೆ ಹಾಗೂ ಸುಂಕ ಮಂಡಳಿ (ಸಿಬಿಐಸಿ) ಜಿಎಸ್‌ಟಿ ನಿಯಮಾವಳಿಗಳಿಗೆ ತಂದಿರುವ ಬದಲಾವಣೆಗಳನ್ನು ನೋಟಿಫೈ ಮಾಡಿದೆ. ಇನ್‌ಪುಟ್ ತೆರಿಗೆ ಕ್ರೆಡಿಟ್ ಮುಖಾಂತರ ತೆರಿಗೆ ಪಾವತಿ ಮಾಡಲು ಕಠಿಣ ನಿಯಮ ತಂದಿದೆ.

ಈ ಸಂಬಂಧ ಜಿಎಸ್‌ಟಿ ನಿಯಮಾವಳಿಯ 86ಬಿ ವಿಧಿಯನ್ನು ಜಾರಿಗೆ ತರಲಾಗಿದ್ದು, ಜನವರಿ 1, 2021ರಿಂದ ಇದು ಅನುಷ್ಠಾನಕ್ಕೆ ಬರಲಿದೆ. ಈ ಮೂಲಕ ಇನ್‌ಪುಟ್ ತೆರಿಗೆ ಕ್ರೆಡಿಟ್ ಮೂಲಕ ಜಿಎಸ್‌ಟಿ ತೆರಿಗೆ ಪಾವತಿಯನ್ನು 99%ನಷ್ಟಕ್ಕೆ ಸೀಮಿತ ಮಾಡಲಾಗಿದೆ.

**ಸುಭಾಷಿತ :** ಸಕಲ ಜೀವಿಗಳಿಗೂ ಸೂರ್ಯನ ಬೆಳಕೇ ಕಾರಣವಾಗಿದ್ದರೂ 'ನೀನು ನನಗೆ ಋಣಿಯಾಗಿರಬೇಕು' ಎಂದು ಸೂರ್ಯನೆಂದೂ ಭೂಮಿಯನ್ನು ಕೇಳಿಲ್ಲ. ಕೊಡುವಾಗ ವಾಪಸು ಕೇಳುವ ಇರಾದೆಯಾಗಲೀ, ಸಹಾಯಮಾಡುವೆನೆಂಬ ಅಹಮಿಕೆಯಾಗಲೀ ಇರಬಾರದು.

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.


# ಸರ್ಕಾರ ರೈತ ಪರ, ಕೃಷಿ ಕಾಯ್ದೆಯೂ ರೈತ ಪರ
# ಮಧ್ಯವರ್ತಿಗಳ ಕಾಟವಿಲ್ಲ, ಎ.ಪಿ.ಎಂ.ಸಿ. ಮುಚ್ಚಲ್ಲ
# ರೈತ ಸ್ನೇಹಿಯಾಗಿ, ರೈತಪರ ಕಾಳಜಿವುಳ್ಳ
## ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಸ್ಪಷ್ಟ ನುಡಿ

**ರೈತಸ್ನೇಹಿಯಾಗಿ, ರೈತಪರ ಕಾಳಜಿವುಳ್ಳ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಖ್ಯಾತ ದಿನಪತ್ರಿಕೆಯೊಂದರಲ್ಲಿ ನೂತನ ಕೃಷಿ ಕಾಯ್ದೆಗಳಿಂದ ರೈತರಿಗೆ ತೊಂದರೆಯಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.**

**ನಾನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ನಮ್ಮದು ರೈತಪರ ಸರ್ಕಾರ. ನಾವು ಯಾವುದೇ ತೀರ್ಮಾನ ತೆಗೆದುಕೊಂಡರೂ ಅದರಲ್ಲಿ ರೈತರ ಹಿತ ಅಡಗಿರುತ್ತದೆ. ಇದರಲ್ಲಿ ರಾಜ್ಯ ಸರ್ಕಾರ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಿರುವುದು ಮತ್ತು ಕೇಂದ್ರ ಸರ್ಕಾರ ಎಪಿಎಂಸಿಗೆ ಸಂಬಂಧಿಸಿದಂತೆ ನೂತನವಾಗಿ ಜಾರಿಗೆ ತಂದಿರುವ ಕಾಯ್ದೆಗಳೂ ಹೊರತಾಗಿಲ್ಲ. ಈ ಕಾಯ್ದೆಗಳು ರೈತರ ಹಿತವನ್ನು ಕಾಪಾಡುವುದಲ್ಲದೆ, ಅವರ ಸ್ವಾಭಿಮಾನವನ್ನು ಎತ್ತಿ ಹಿಡಿಯುತ್ತವೆ. ನನ್ನ ಬೆಳೆ, ನನ್ನ ಹಕ್ಕು ಎಂದು ನಮ್ಮ ಅನ್ನದಾತ ಹೆಮ್ಮೆಯಿಂದ ಹೇಳಿಕೊಳ್ಳಲು ಸಹಕಾರಿಯಾಗಿವೆ. ಇದನ್ನು ಮುಂದುವರೆಸಿದಲ್ಲಿ ನನ್ನ ಬೆಳೆ, ನನ್ನ ಬೆಲೆ ಎಂಬ ಅಧಿಕಾರ ಸಹ ರೈತನಿಗೆ ಬರಲಿದೆ.**



**ವ್ಯವಸ್ಥೆಯಲ್ಲಿನ ಲೋಪ :** ಹೌದು. ಈ ಹಿಂದಿನಿಂದಲೂ ರೈತ ಅನ್ಯಾಯಕ್ಕೆ ಒಳಗಾಗುತ್ತಲೇ ಬಂದಿದ್ದಾನೆ. ಮಳೆ ಬರಲಿ, ಬಾರದಿರಲಿ, ಉತ್ಪಾದನೆ ಹೆಚ್ಚಿರಲಿ, ಕಡಿಮೆ ಇರಲಿ ಹೊಲದಲ್ಲಿ ಕಷ್ಟಪಟ್ಟು ಉತ್ತಿಬಿತ್ತಿದ ಬೆಳೆಗೆ ನೈಜ ಬೆಲೆ ಸಿಗುತ್ತಲೇ ಇಲ್ಲ ಎಂಬ ಕೊರಗು ನಮ್ಮ ಅನ್ನದಾತರನ್ನು ಕಾಡುತ್ತಲೇ ಇದೆ. ಇದಕ್ಕೆ ಬಹುಮುಖ್ಯ ಕಾರಣ, ನಮ್ಮ ವ್ಯವಸ್ಥೆಯಲ್ಲಿರುವ ಲೋಪ ಎಂದೇ ಹೇಳಬಹುದು. ಕಷ್ಟಪಟ್ಟು ಬೆಳೆ ಬೆಳೆಯುವ ರೈತ, ಬೆಳೆಗಳನ್ನು ಕೊಯ್ದು, ಸಂಸ್ಕರಿಸಿ, ಚೀಲಕ್ಕೆ ತುಂಬಿ, ವಾಹನಗಳಲ್ಲಿ ಅವುಗಳನ್ನು ಹೇರಿಕೊಂಡು ಎಪಿಎಂಸಿಗಳಿಗೆ ಬಂದರೆ ಆತನಿಗೆ ದಕ್ಕುವುದು ಏನು? ಈ ಪ್ರಶ್ನೆಯನ್ನು ರೈತ ಒಬ್ಬನೇ ಏಕೆ ಸಮಾಜದ ಪ್ರತಿಯೊಬ್ಬರೂ ಹಾಕಿಕೊಳ್ಳಬೇಕಿದೆ. ಇದು ನಮ್ಮ ಕರ್ತವ್ಯ ಕೂಡ. ರೈತನ ಬಳಿ ಭಾರೀ ಕಡಿಮೆ ದರಕ್ಕೆ ಖರೀದಿ ಮಾಡುವ ದಲ್ಲಾಳಿ/ ಮಧ್ಯವರ್ತಿ ವ್ಯಾಪಾರಿ ಆತನ ಕಣ್ಣ ಮುಂದೆಯೇ ದುಪ್ಪಟ್ಟು ದರಕ್ಕೆ ಮಾರಾಟ ಮಾಡುತ್ತಾನೆ.




ಹಾಗಾದರೆ, ಇದು ವ್ಯವಸ್ಥೆಯಲ್ಲಿನ ಲೋಪವಲ್ಲದೆ ಮತ್ತಿನ್ನೇನು ಎಂದು ನಾನು ಈ ಸಂದರ್ಭದಲ್ಲಿ ಬಹಿರಂಗವಾಗಿ ಕೇಳಲು ಇಚ್ಛಿಸುತ್ತೇನೆ. ಹೌದು. ಗ್ರಾಹಕ ಉಪಯೋಗಿ ಉತ್ಪನ್ನಗಳನ್ನು ಮಾರುವ ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಎಂಆರ್‌ಪಿ (Maximum Ratil Price)ಯನ್ನು ನಿಗದಿ ಮಾಡಿಕೊಳ್ಳಲು ನಾವು ಅವಕಾಶವನ್ನು ಕೊಡುತ್ತೇವೆ. ಅದೇ ನಾಡಿನ ಜನತೆಯ ಹೊಟ್ಟೆಗೆ ಅನ್ನ ಹಾಕುವ ಅನ್ನದಾತನಿಗೆ ಆ ಹಕ್ಕನ್ನು ಕೊಡುವುದಿಲ್ಲವೇ? ಇದೆಂಥಾ ನ್ಯಾಯ ಎಂದು ಇದರ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡುತ್ತಿರುವ ಪ್ರತಿಪಕ್ಷಗಳ ನಾಯಕರನ್ನು ಕೇಳಲು ಇಚ್ಛೆಪಡುತ್ತೇನೆ.

**ರೈತನೂ ಬೆಲೆ ನಿರ್ಧರಿಸಲಿ :** ಒಂದು ಬಹುರಾಷ್ಟ್ರೀಯ ಕಂಪನಿಯು ತನ್ನ ಉತ್ಪನ್ನಕ್ಕೆ ದರ ನಿಗದಿಪಡಿಸಿದಂತೆ ಬೆಳೆದ ಬೆಳೆಗೆ ತಾನೇ ಬೆಲೆ ನಿರ್ಧರಿಸುವ ಹಕ್ಕು ರೈತನದ್ದಾಗಬೇಕು. ರೈತ ಸ್ವತಂತ್ರ



ಜೀವಿಯಾಗಬೇಕು. "ನನ್ನ ಬೆಳೆ, ನನ್ನ ಹಕ್ಕು" ಎಂಬ ಘೋಷವಾಕ್ಯ ಪ್ರತಿಯೊಬ್ಬ ರೈತನದ್ದಾಗಿರಬೇಕು. ಕೇಂದ್ರ ಸರ್ಕಾರದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಕೃಷಿ ಉತ್ಪನ್ನ ಮತ್ತು ಪಶುಸಂಪತ್ತು ಮಾರುಕಟ್ಟೆ (ಪ್ರಚಾರ ಮತ್ತು ಸೌಲಭ್ಯ) ಕಾಯ್ದೆ–2017 ಮಾದರಿ ಕಾಯ್ದೆಯ ಶಿಫಾರಸುಗಳನ್ವಯ ರಾಜ್ಯದ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಇದರನ್ವಯ ಕಲಂ 8(2) ಮತ್ತು ಕಲಂ 117ಕ್ಕೆ ತಿದ್ದುಪಡಿ ಮಾಡಲಾಗಿದೆ. ಕಲಂ 8(3)ನ್ನು ಕೈಬಿಡಲಾಗಿದೆ. ಕಲಂ 8(2)ರಡಿ ಇದುವರೆಗೆ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಪ್ರಾಂಗಣದಲ್ಲೇ ಮಾರಾಟ ಮಾಡಬೇಕೆಂಬ ನಿರ್ಬಂಧವನ್ನು ತೆಗೆದು ಹಾಕಲಾಗಿದೆ. ಎಪಿಎಂಸಿ ಸಮಿತಿಯ ನಿಯಂತ್ರಣವನ್ನು ಪ್ರಾಂಗಣಕ್ಕೆ ಸೀಮಿತಗೊಳಿಸಿದೆ. ಕಲಂ 8(2)ರ ಉಲ್ಲಂಘನೆಗೆ ದಂಡ ಮತ್ತು ಸಜೆ ಶಿಕ್ಷೆಯನ್ನು ವಿಧಿಸುತ್ತಿದ್ದ ಕಲಂ 117 ಕೈಬಿಡಲಾಗಿದೆ. ಈ ತಿದ್ದುಪಡಿಯಿಂದ ರೈತ ತಾನು ಬೆಳೆದ ಬೆಳೆಯನ್ನು ತನ್ನ ಇಚ್ಛೆಯಂತೆ ಹೊಲ/ಫಾರಂ ಗೇಟ್ ಅಥವಾ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸ್ವಾತಂತ್ರ್ಯ ಹೊಂದಿದ್ದಾನೆ.

ನಮ್ಮ ಸರ್ಕಾರ ತಿದ್ದುಪಡಿ ತಂದ ನಂತರದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ರೈತರ ಉತ್ಪಾದನೆ ವ್ಯಾಪಾರ ಮತ್ತು ವಾಣಿಜ್ಯ (ಪ್ರಚಾರ ಮತ್ತು ಸೌಲಭ್ಯ) ಕಾಯ್ದೆ–2020 ಜಾರಿಗೆ ತಂದು ರೈತರ ಪರವಾಗಿ ನಿಂತಿದೆ. ಆದರೆ, ಕೆಲವು ಹಿತಾಸಕ್ತಿಗಳು ಇದನ್ನು ರಾಜಕೀಯ ದುರುದ್ದೇಶಕ್ಕೆ ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ ಎಂಬುದು ಮೇಲ್ನೋಟಕ್ಕೆ ತಿಳಿಯುತ್ತದೆ. ಆದರೆ ವಾಸ್ತವ ಸತ್ಯ ಎಂದಿದ್ದರೂ ಒಂದೇ. ಈ ಬಗ್ಗೆ ಎಲ್ಲರಿಗೂ ಶೀಘ್ರದಲ್ಲಿಯೇ ಮನದಟ್ಟಾಗಲಿದೆ.

**ಕಾಯ್ದೆಗೆ ವಿರೋಧ ಏಕೆ? :** ನಾನು ಕೋವಿಡ್–19 ಲಾಕ್ಡೌನ್ ಮತ್ತು ನಂತರದ ಸಂದರ್ಭಗಳಲ್ಲಿ 27 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಆಗ ಎಲ್ಲ ಜಿಲ್ಲೆಗಳ ಎಪಿಎಂಸಿಗಳಿಗೂ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದೇನೆ. ಎಲ್ಲ ರೈತರಿಂದಲೂ ಒಂದೇ ದೂರೆಂದರೆ ನಮ್ಮ ಬೆಳೆಗೆ ಸೂಕ್ತ ಬೆಲೆ ಸಿಗುತ್ತಿಲ್ಲ ಎಂಬುದಾಗಿತ್ತು. ಆಗ ಈ ನೂತನ ಎಪಿಎಂಸಿ ಕಾಯ್ದೆ ಬಗ್ಗೆ ಅವರಲ್ಲಿ ನಾನು ಖುದ್ದು ಕೇಳಿದಾಗ ಎಲ್ಲರೂ ಸಂತಸವನ್ನು ವ್ಯಕ್ತಪಡಿಸಿದ್ದಾರೇ ವಿನಃ ಅದರ ಬಗ್ಗೆ ಎದುರು ಮಾತನಾಡಿಲ್ಲ. ಇನ್ನು ವಿರೋಧ ಮಾಡುವ ಬಹುತೇಕರಿಗೆ ಆ ಕಾಯ್ದೆಯಲ್ಲೇನಿದೆ ಎಂಬುದೇ ಗೊತ್ತಿಲ್ಲ ಎಂದು ನಾನು ಭಾವಿಸುತ್ತೇನೆ. ಒಮ್ಮೆ ಸರಿಯಾದ ದೃಷ್ಟಿಯಿಂದ ಎಲ್ಲರೂ ನೋಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ವಿರೋಧಿಸುವವರು ಸರಿಯಾದ ಆಧಾರವನ್ನಿಟ್ಟು ಕೊಳ್ಳಬೇಕು. ಇದುವರೆಗೂ ವಿರೋಧ ಮಾಡುತ್ತಿರುವವರು ಕಾಯ್ದೆ ಜಾರಿ ಬೇಡ ಎನ್ನುತ್ತಿದ್ದಾರೆಯೇ ವಿನಃ ಆ ಕಾಯ್ದೆಯನ್ನು ಏಕೆ ಜಾರಿಗೆ ತರಬಾರದು, ತಂದರೆ ಏನಾಗುತ್ತದೆ ಎಂಬ ಬಗ್ಗೆ ಯಾವೊಬ್ಬರೂ ಮಾತನಾಡುತ್ತಿಲ್ಲ. ಅವರ ವಿರೋಧದ ಬಗ್ಗೆ ಅರ್ಥ ಮಾಡಿಕೊಳ್ಳಲು ಇಷ್ಟೇ ಸಾಕಲ್ಲವೇ?

**ದಂಡ ಹಾಗೂ ಶಿಕ್ಷೆ ಇಲ್ಲ :** ಕೇಂದ್ರ ಸರ್ಕಾರದ ಕಾಯ್ದೆ ಪೂರ್ವದಲ್ಲಿ ಇದ್ದ ರಾಜ್ಯ ಸರ್ಕಾರದ ಎಪಿಎಂಸಿ ಕಾಯ್ದೆಯಡಿ ಉತ್ಪನ್ನಗಳ ವ್ಯಾಪಾರ ನಿಯಂತ್ರಣ ರಾಜ್ಯ ವ್ಯಾಪ್ತಿ ಇತ್ತು. ಅದರನ್ವಯ ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಪ್ರಾಂಗಣದಲ್ಲಿಯೇ ಮಾರುವುದು ಅನಿವಾರ್ಯವಿತ್ತು. ಪ್ರಾಂಗಣದ ಹೊರಗೆ ಯಾವುದೇ ವ್ಯಾಪಾರಿ ಖರೀದಿಸಿದಲ್ಲಿ ದಂಡ ಮತ್ತು ಕಾರಾಗೃಹ ವಾಸದ ಶಿಕ್ಷೆಗೆ ಗುರಿಯಾಗಬೇಕಿತ್ತು. ಪ್ರಸ್ತುತ ತಿದ್ದುಪಡಿಯಲ್ಲಿ ದಂಡ ಮತ್ತು ಶಿಕ್ಷೆ ವಿಧಿಸುವುದನ್ನು ಕೈಬಿಟ್ಟಿರುವುದರಿಂದ ವ್ಯಾಪಾರಕ್ಕೆ ಮುಕ್ತ ಅವಕಾಶ



ಕಲ್ಪಿಸಲಾಗಿದೆ.

**ಎಲ್ಲೆಡೆ ಮಾರಾಟಕ್ಕೆ ಅವಕಾಶ :** ತಿದ್ದುಪಡಿ ನಂತರದಲ್ಲಿ ರೈತರು ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆ ಪ್ರಾಂಗಣದಲ್ಲಿ ಅಥವಾ ರಾಜ್ಯದ ಯಾವುದೇ ಮೂಲೆಯಲ್ಲಿ ಬೇಕಿದ್ದರೂ ಮಾರಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಅಂತರ್ ಜಿಲ್ಲೆ ಮತ್ತು ರಾಜ್ಯಗಳಲ್ಲಿ ರೈತರು ನಿರ್ಧರಿಸಿದ ಬೆಲೆಗೆ ಮಾರಾಟ ಮಾಡಲು ಅವಕಾಶವನ್ನು ಮಾಡಿಕೊಡಲಾಗಿದೆ.

**ಇದ್ದಲ್ಲಿಗೇ ಬಂದು ಖರೀದಿ :** ರೈತ ಬಾಂಧವರು ಯಾವುದೇ ವ್ಯಾಪಾರಿಗಳಿಗೆ, ಯಾವುದೇ ಮಾರು ಕಟ್ಟೆಗಳಲ್ಲಿ ಬೆಳೆಯನ್ನು ಮಾರಾಟ ಮಾಡಬಹುದು. ಇದಲ್ಲದೆ, ಬೇರೆ ರಾಜ್ಯಗಳಿಗೂ ತೆರಳಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಅವಕಾಶವನ್ನು ಈಗ ಕಲ್ಪಿಸಲಾಗಿದೆ. ಇಲ್ಲವೇ ವ್ಯಾಪಾರಿಗಳು ರೈತರ ಮನೆ ಬಾಗಿಲಿಗೆ, ಇಲ್ಲವೇ ಹೊಲಗಳಿಗೇ ಬಂದು ಬೆಳೆಗಳನ್ನು ಖರೀದಿ ಮಾಡಬಹುದು.

**ಹೆಚ್ಚಲಿದೆ ಸ್ಪರ್ಧೆ, ಏರಲಿದೆ ಬೆಲೆ :** ಯಾರಿಗೆ ಬೇಕಾದರೂ ಎಲ್ಲಿ ಬೇಕಾದರೂ ಬೆಳೆಯನ್ನು ಮಾರಾಟ ಮಾಡುವ ಹಕ್ಕನ್ನು ರೈತರಿಗೆ ನೀಡಿರುವ ಪರಿಣಾಮ ರೈತನಿಗೆ ಹೆಚ್ಚಿನ ಅವಕಾಶಗಳು ಸಿಗುವುದರೊಂದಿಗೆ ವ್ಯಾಪಾರಿಗಳ ಮಧ್ಯೆ ಸ್ಪರ್ಧೆ ಏರ್ಪಡುತ್ತದೆ. ಈ ಹಿನ್ನೆಲೆಯಲ್ಲಿ ಒಬ್ಬರಿಗೇ ಮಾರಾಟ ಮಾಡಬೇಕೆಂಬ ನಿಬಂಧನೆಗಳಿಲ್ಲದೆ, ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳುವವರಿಗೆ ಮಾರಾಟ ಮಾಡಿ ರೈತರು ಅಧಿಕ ಲಾಭವನ್ನು ಗಳಿಸಬಹುದು.

**ಮುಕ್ತ ಮಾರುಕಟ್ಟೆ ಅವಕಾಶ :** ರೈತ–ಮಾರಾಟಗಾರರಿಗೆ ಈಗಾಗಲೇ ಇರುವ ವಿವಿಧ ಮಾರುಕಟ್ಟೆ ಚಾನಲ್‌ಗಳಾದ ಮಾರುಕಟ್ಟೆ ಪ್ರಾಂಗಣ, ನೇರ ಖರೀದಿ ಕೇಂದ್ರ, ಖಾಸಗಿ ಮಾರುಕಟ್ಟೆ ಪ್ರಾಂಗಣ, ರೈತ–ಗ್ರಾಹಕ ಮಾರುಕಟ್ಟೆ ಪ್ರಾಂಗಣ ವೇರ್‌ಹೌಸ್ ಇತ್ಯಾದಿಗಳೊಂದಿಗೆ ಈಗ ಮತ್ತೊಂದು ಉತ್ತಮ ಬದಲಿ ಸೌಕರ್ಯ ಲಭ್ಯವಿರುವಂತಾಗಿದ್ದು, ಮುಕ್ತ ಮಾರುಕಟ್ಟೆ ದೊರೆತಂತಾಗಿದೆ.

**ತಪ್ಪಲಿದೆ ಮಧ್ಯವರ್ತಿಗಳ ಹಾವಳಿ :** ರೈತರು ಈ ಹಿಂದೆ ತಮ್ಮ ಉತ್ಪನ್ನಗಳನ್ನು ತಮ್ಮದಲ್ಲದ ಸ್ಥಳಗಳಿಗೆ ಒಯ್ದು ಮಾರಾಟ ಮಾಡಲು ಅಧಿಕೃತ ದಾಖಲೆಗಳಾದ ಪಹಣಿ ಅಥವಾ ಸ್ಥಳೀಯ ರೆವಿನ್ಯೂ ಅಧಿಕಾರಿಗಳು ನೀಡುವ ದೃಢೀಕರಣದೊಂದಿಗೆ ಅವಕಾಶ ಕಲ್ಪಿಸಲಾಗಿತ್ತು. ಪ್ರಸ್ತುತ ತಿದ್ದುಪಡಿಯಿಂದಾಗಿ ಯಾವುದೇ ದಾಖಲಾತಿಗಳಿಲ್ಲದೆ ತಮ್ಮ ಉತ್ಪನ್ನಗಳನ್ನು ಸಾಗಾಟ ಮಾಡಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯ ಸರ್ಕಾರ ರೈತರ ಆದಾಯವನ್ನು ದ್ವಿಗುಣಗೊಳಿಸಲು ಮತ್ತು ರೈತರ ಸಾಗಾಣಿಕಾ ವೆಚ್ಚ ಹಾಗೂ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಈ ಕ್ರಮ ವಹಿಸಿದೆ. ಇದರಿಂದ ರೈತರು ಆರ್ಥಿಕ ಶಕ್ತಿವಂತರಾಗುತ್ತಾರೆ.

**ಎಪಿಎಂಸಿ ಮುಚ್ಚಲ್ಲ :** ನೂತನ ಎಪಿಎಂಸಿ ಕಾಯ್ದೆಯಿಂದ ಯಾರೂ ಆತಂಕ ಪಡಬೇಕಿಲ್ಲ. ಇದರಿಂದ ಈ ಹಿಂದಿನ ವ್ಯವಸ್ಥೆಗೆ ಯಾವುದೇ ಧಕ್ಕೆಯಾಗಿಲ್ಲ. ಅಲ್ಲದೆ, ಎಪಿಎಂಸಿಯನ್ನು ಮುಚ್ಚುವ ಯಾವುದೇ ಪ್ರಸ್ತಾಪ ರಾಜ್ಯ ಸರ್ಕಾರದ ಮುಂದೆ ಇಲ್ಲ.

**ಕನಿಷ್ಠ ಬೆಂಬಲ ಬೆಲೆ ಭಯ ಬೇಡ :** ಎಪಿಎಂಸಿ ಕಾಯ್ದೆ ಜಾರಿಯಿಂದ ಈ ಹಿಂದಿನ ಸೌಲಭ್ಯಗಳು ಇರುವುದಿಲ್ಲವೆಂಬ ಆತಂಕ ಯಾರಿಗೂ ಬೇಡ. ಯಾವುದೇ ಕೃಷಿ ಉತ್ಪನ್ನಗಳ ಬೆಲೆ ಕುಸಿತ ಉಂಟಾದಾಗ ಎಂದಿನಂತೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಪ್ರಕ್ರಿಯೆ ನಡೆಯುತ್ತದೆ. ಈ ಬಗ್ಗೆ ಸರ್ಕಾರ ಅಭಯ ನೀಡುತ್ತದೆ.

**ರೈತರಿಗೆ ತೊಂದರೆಯಾಗಲ್ಲ :** ಎಪಿಎಂಸಿ ಪ್ರಾಂಗಣದಲ್ಲಿ ವ್ಯಾಪಾರ ಮಾಡುವ ಜೊತೆಯಲ್ಲಿಯೇ 2007ರಲ್ಲಿ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಿ ಎಪಿಎಂಸಿ ಪ್ರಾಂಗಣದ ಹೊರಗೆ ರೈತರಿಂದ ನೇರ ಖರೀದಿಗೆ ಅವಕಾಶ ಕಲ್ಪಿಸಿ ನೇರ ಖರೀದಿ ಕೇಂದ್ರಗಳಿಗೆ ಲೈಸೆನ್ಸ್ ನೀಡಲಾಗಿದೆ. ಇದುವರೆವಿಗೂ 62 ಕಂಪನಿಗಳು ನೇರ ಖರೀದಿ ಲೈಸೆನ್ಸ್ ಪಡೆದು ಕಾರ್ಯ ನಿರ್ವಹಿಸುತ್ತಿವೆ. ಈಗಾಗಲೇ ಹಲವು ವರ್ಷಗಳಿಂದ ದೊಡ್ಡ ದೊಡ್ಡ ಕಂಪನಿಗಳು ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯಾಪಾರ ಮಾಡುತ್ತಿದೆ. ತಿದ್ದುಪಡಿ ಏನೂ ಹೊಸತಲ್ಲ. 2014ರಿಂದ ಆನ್‌ಲೈನ್ ಟ್ರೇಡಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಹಿಂದೆ ಆಗದ ತೊಂದರೆ ಈಗ ಹೇಗೆ ಆಗಲು ಸಾಧ್ಯ ಎಂಬುದು ನನ್ನ ಪ್ರಶ್ನೆಯಾಗಿದೆ.

**ಇದು ರೈತ ಸ್ನೇಹಿ ಕಾಯ್ದೆ :** ಇಂತಹ ಐತಿಹಾಸಿಕ ಕೃಷಿ ಕಾಯ್ದೆಯನ್ನು ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಯಡಿಯೂರಪ್ಪ ಅವರು ಜಾರಿಗೊಳಿಸಿದ್ದಾರೆ. ಇದೊಂದು ರೈತಸ್ನೇಹಿ ಕಾಯ್ದೆಯಾಗಿದೆ.

(ಕೃಪೆ : ಕನ್ನಡ ಪ್ರಭ)

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ವಾರ್ಷಿಕ ಮಹಾಸಭೆ

## ಪರಿಣಾಮ ಶಿಕ್ಷಣ, ತರಬೇತಿಗೆ ಆದ್ಯತೆ – ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ



**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ 2019–20ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ವಿಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್ ಮೂಲಕ ಶ್ರೀ ಕೆ.ಲಲಿತ ಜಿ.ಟಿ. ದೇವೇಗೌಡರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಹಾಮಂಡಳದ 2019–20ನೇ ಸಾಲಿನ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಿದ್ದ ಸದಸ್ಯ ಸಹಕಾರ ಸಂಘಗಳ ಪ್ರತಿನಿಧಿಗಳು ವಿಷಯವಾರು ಚರ್ಚೆಯಲ್ಲಿ ಪಾಲ್ಗೊಂಡು ಪತ್ತಿನ ಸಹಕಾರ ಸಂಘಗಳು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವಿ ಮಾಡಿಕೊಡುವ ಮುಖಾಂತರ ಕಾರ್ಯೋನ್ಮುಖರಾಗುವಂತೆ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚಿಸುವ ಮೂಲಕ ಮಹಾಮಂಡಳದ ಕಾರ್ಯ ಚಟುವಟಿಕೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸಲು ಸಲಹೆಗಳನ್ನು ನೀಡಿದರು.

ಅಧ್ಯಕ್ಷರು ಮಾತನಾಡಿ, 2020ನೇ ವರ್ಷವು ಪತ್ತಿನ ಸಹಕಾರ ಸಂಘಗಳಿಗೆ ಹಾಗೂ ಇತರೆ ಸಹಕಾರ ಸಂಘಗಳಿಗೆ ಅತ್ಯಧಿಕ ಸವಾಲಿನ ವರ್ಷವಾಗಿತ್ತು. ಪ್ರಪಂಚದಾದ್ಯಂತ ಕೋವಿಡ್–19 ಪಿಡುಗು ಇಡೀ ವಿಶ್ವವನ್ನೇ ತಲ್ಲಣಗೊಳಿಸಿ, ವಿಶ್ವದ ಆರ್ಥಿಕ ವ್ಯವಸ್ಥೆಗೆ ಅಪಾರ ಪೆಟ್ಟು ನೀಡಿರುತ್ತದೆ. ಈ ಕೋವಿಡ್–19 ರಿಂದಾಗಿ ಪತ್ತಿನ ವ್ಯವಹಾರ ನಿರ್ವಹಿಸುವ ಪತ್ತಿನ ಸಹಕಾರ ಸಂಘಗಳು ಹಾಗೂ ಇತರೆ ಸಹಕಾರ ಸಂಘಗಳು ಅಪಾರ ಆರ್ಥಿಕ ನಷ್ಟಕ್ಕೆ ಗುರಿಯಾಗಿರುತ್ತವೆ ಎಂದರು.

ಸಹಕಾರ ಸಂಘಗಳ ವಹಿವಾಟುಗಳಿಗೆ ಅಪಾರ ಹಾನಿಯುಂಟಾಗಿರುತ್ತದೆ. ಈ ಒಂದು ಕ್ಲಿಷ್ಟ ಸಮಯದಲ್ಲಿ ಪತ್ತಿನ ಸಹಕಾರ ಸಂಘಗಳು ಹಾಗೂ ಇತರೆ ಸಹಕಾರ ಸಂಘಗಳು ಈ ಸಮಸ್ಯೆಯನ್ನು ಸಮರೋಪಾದಿಯಲ್ಲಿ ಎದುರಿಸಿ ಸಹಕಾರ ಸಂಘಗಳ ಆರ್ಥಿಕ ಸ್ಥಿತಿಯನ್ನು ಸರಿದಾರಿಗೆ ತರುವಲ್ಲಿ ಸಫಲರಾಗಲೆಂದು ಮಹಾಮಂಡಳದ ಪರವಾಗಿ ಹಾರೈಸಿದರು.





ರಾಜ್ಯದಲ್ಲಿ ಸುಮಾರು 4505 ಪತ್ತಿನ ಸಹಕಾರ ಸಂಘಗಳು ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿವೆ. ಪತ್ತಿನ ಸಹಕಾರ ಸಂಘಗಳು 4909455 ಲಕ್ಷ ಸದಸ್ಯರುಗಳನ್ನು ಹೊಂದಿದ್ದು ಅಂದಾಜು ರೂ.114799 ಕೋಟಿ ಠೇವಣಿಯನ್ನು ಸಂಗ್ರಹಿಸಿದ್ದು ಒಟ್ಟು ರೂ.222482 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿವೆ. ಮಹಾಮಂಡಳವು ಪತ್ತಿನ ಸಹಕಾರ ಸಂಘಗಳನ್ನು ಹಾಗೂ ಸಾಲ ಸೌಲಭ್ಯ ನೀಡುತ್ತಿರುವ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸದಸ್ಯರನ್ನಾಗಿ ನೋಂದಾಯಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ.

ಒಟ್ಟು 1395 ಇ–ಸ್ಟಾಂಪಿಂಗ್ ಕೇಂದ್ರಗಳಿಗೆ ಇ–ಸ್ಟಾಂಪಿಂಗ್ ಪರವಾನಗಿ ನೀಡಲಾಗಿದ್ದು ಅವು ಕಾರ್ಯನಿರ್ವಹಿಸುತ್ತಿರುವುದರ ಬಗ್ಗೆ ತಿಳಿಸಿ ಮಹಾಮಂಡಳವು ಈಗಾಗಲೇ ಸ್ವಂತ ನಿವೇಶನ ಹೊಂದಿದ್ದು ತನ್ನದೇ ಆದ ಕಟ್ಟಡವನ್ನು ಹೊಂದುವ ಸಲುವಾಗಿ ಈಗಾಗಲೇ ಅಂದಾಜು ಪಟ್ಟಿ ಹಾಗೂ ನಕ್ಷೆಯನ್ನು ತಯಾರಿಸಿ ಅನುಮೋದನೆ ಪಡೆದುಕೊಂಡು ಶೀಘ್ರದಲ್ಲಿಯೇ ಕಟ್ಟಡದ ಶಂಕುಸ್ಥಾಪನೆ ಮಾಡಿ ಕಟ್ಟಡ ನಿರ್ಮಾಣ ಮಾಡಿ 2021ರಲ್ಲಿ ಕಟ್ಟಡ ನಿರ್ಮಾಣ ಪೂರ್ಣಗೊಳಿಸುವ ಉದ್ದೇಶ ಹೊಂದಿರುತ್ತದೆ. ಎಲ್ಲಾ ಸಹಕಾರ ಸಂಘಗಳು ಹಾಗೂ ಸಹಕಾರಿಗಳು ಈ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಪೂರ್ಣ ಪ್ರಮಾಣದ ಬೆಂಬಲ ನೀಡುವಂತೆ ಕೋರಿದರು.

ಸಭೆಯ ಆರಂಭದಲ್ಲಿ ನಿರ್ದೇಶಕರಾದ ಶ್ರೀ ಎಂ.ಜೆ.ನರೇಂದ್ರ ಕುಮಾರರವರು ಪ್ರಾರ್ಥನೆ ಮಾಡಿದರು. ಉಪಾಧ್ಯಕ್ಷರಾದ ಶ್ರೀ ಬಿ.ಡಿ.ಭೂಕಾಂತ, ನಿರ್ದೇಶಕರುಗಳಾದ ಶ್ರೀ ಸಿ.ಎಂ.ಮಾರೇಗೌಡ, ಶ್ರೀ ರಾಜು, ಡಾ॥ ಸಂಜಯ ಪಿ.ಹೊಸಮಠ, ಶ್ರೀ ಎಂ.ಜೆ. ನರೇಂದ್ರಕುಮಾರ, ಶ್ರೀ ಡಿ.ಚನ್ನಯ್ಯ, ಶ್ರೀ ಕೆ.ಕೃಷ್ಣಮೂರ್ತಿ, ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ, ಶ್ರೀ ಜಿ.ಮಲ್ಲಿಕಾರ್ಜುನಯ್ಯ, ಶ್ರೀ ತಮ್ಮಣ್ಣ ಬಾಲಪ್ಪ ಕಂಚರಡ್ಡಿ, ಶ್ರೀಗುರುಪಾದಪ್ಪಗೌಡ ಬ ಪಾಟೀಲ, ಶ್ರೀ ಹೊನ್ನಯ್ಯ ವಿ ಹಿರೇಮಠ, ಶ್ರೀ ಹೆಚ್.ಟಿ.ನಾಗೇಶ್, ಶ್ರೀ ಡಿ.ಆರ್.ನಾಗೇಶಪ್ಪ, ಶ್ರೀ ಉಮೇಶ್ ಶಿ ಬಾಳಿ, ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ, ಶ್ರೀ ಚಿತ್ತರಂಜನ್ ಬೋಳಾರ್, ಸಲಹೆಗಾರರಾದ ಶ್ರೀ ಕೆ.ಎಸ್.ಗುರುಪ್ರಸಾದ್, ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಆಶಾಲತಾ ಪಿ. ರವರು ಉಪಸ್ಥಿತರಿದ್ದರು.



# ಸ್ವದೇಶಿ ಉತ್ಪನ್ನಗಳನ್ನು ಬೆಂಬಲಿಸೋಣ- ಪ್ರಧಾನಿ ನರೇಂದ್ರ ಮೋದಿ




ವಿದೇಶಿ ಉತ್ಪನ್ನಗಳ ಬಳಕೆ ತಗ್ಗಿಸಿ, ಭಾರತದಲ್ಲೇ ತಯಾರಾಗುವ ವಸ್ತುಗಳನ್ನು ಉಪಯೋಗಿಸುವ ಮೂಲಕ 'ಆತ್ಮನಿರ್ಭರ ಭಾರತ' ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಯಲ್ಲಿ ಮನವಿ ಮಾಡಿದರು.

ಆಕಾಶವಾಣಿಯ ಮೂಲಕ 2020ನೇ ಸಾಲಿನ ಕೊನೆಯ "ಮನದ ಮಾತು" ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಆರಂಭಿಸಿದ್ದ ಸ್ವದೇಶೀ (ವೋಕಲ್ ಫಾರ್ ಲೋಕಲ್) ಆಂದೋಲನಕ್ಕೆ ದೇಶದ ಜನರು ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ. ಈ ಘೋಷಣೆ ಈಗ ಮನೆಮನೆಯಲ್ಲಿ ಪ್ರತಿಧ್ವನಿಸುತ್ತಿದೆ. ಜಾಗತಿಕ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವ ಹೊಣೆ ನಮ್ಮ ದೇಶದ ತಯಾರಕರ ಮೇಲೆ ಇದೆ ಎಂದರು. "ವೋಕಲ್ ಫಾರ್ ಲೋಕಲ್" ಅಭಿಯಾನಕ್ಕೆ ಜನರಿಂದ ಬಂದ ಪ್ರತಿಕ್ರಿಯೆಗಳನ್ನು ಅವರು ಹಂಚಿಕೊಂಡರು.

ಪ್ರತಿಯೊಬ್ಬರೂ ತಾವು ನಿತ್ಯ ಬಳಸುವ ವಸ್ತುಗಳ ಒಂದು ಪಟ್ಟಿಯನ್ನು ಮಾಡಬೇಕು. ಅದರಲ್ಲಿ ವಿದೇಶಿ ಸಂಸ್ಥೆಗಳು ತಯಾರಿಸಿದ ಎಷ್ಟು ವಸ್ತುಗಳಿವೆ ಎಂಬುದನ್ನು ಗುರುತಿಸಿ ಅವುಗಳ ಬದಲಿಗೆ ಸ್ವದೇಶಿ ಉತ್ಪನ್ನಗಳ ಬಳಕೆಯನ್ನು ಆರಂಭಿಸಬೇಕು ಎಂದು ಅವರು ಮನವಿ ಮಾಡಿದರು.

**ಪ್ರಧಾನಿ ಮೋದಿ ಹೇಳಿದ್ದು**

- ಹೊಸವರ್ಷದ ದಿನದಂದು ಎಲ್ಲರೂ ಕನಿಷ್ಠ ಒಂದು ಹೊಸ ನಿರ್ಣಯ ಕೈಗೊಳ್ಳುವುದಿಲ್ಲವೇ? ಈ ಬಾರಿ ದೇಶದ ಪರವಾಗಿ ಒಂದು ನಿರ್ಣಯ ಕೈಗೊಳ್ಳೋಣ.
- ವ್ಯಾಪಾರಿಗಳು ಭಾರತದಲ್ಲಿ ತಯಾರಾದದ್ದು ಎಂದು ಪ್ರಚಾರ ಮಾಡಿ, ಕೆಲವು ಉತ್ಪನ್ನಗಳನ್ನು ಮಾರುತ್ತಿದ್ದಾರೆ. ಆದರಿಂದ ಒಳ್ಳೆಯ ಪ್ರತಿಕ್ರಿಯೆಯೂ ಬರುತ್ತಿವೆ. ಒಂದು ವರ್ಷದ ಅವಧಿಯಲ್ಲಿ ನಮ್ಮ ಮನಸ್ಥಿತಿಯಲ್ಲಿ ದೊಡ್ಡ ಬದಲಾವಣೆ ಆಗಿದೆ.
- ಒಂದೇ ಬಾರಿ ಬಳಸುವ ಪ್ಲಾಸ್ಟಿಕ್‌ನಿಂದ ದೇಶವನ್ನು ಹೊಸ ವರ್ಷದಲ್ಲಿ ಸಂಪೂರ್ಣವಾಗಿ ಮುಕ್ತಗೊಳಿಸಬೇಕು.

# ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.) : ರೂ.134.98 ಲಕ್ಷ ಲಾಭ

ಮಂಗಳೂರಿನ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ 2019-20ನೇ ಸಾಲಿನ 9ನೇ ವಾರ್ಷಿಕ ಸಾಮಾನ್ಯ ಸಭೆಯು ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಮುಖಾಂತರ ದಿನಾಂಕ : 18-12-2020 ರಂದು ಸಂಘದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಂಘದ 2019-20ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪತ್ರವನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್ ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿದರು.

ನಂತರ ಅಧ್ಯಕ್ಷರು ಮಾತನಾಡಿ ಸಂಘವು 2019-20ನೇ ಸಾಲಿನಲ್ಲಿ 17 ಶಾಖೆಗಳನ್ನು ಹೊಂದಿದ್ದು, ತನ್ನ ಕಾರ್ಯವ್ಯಾಪ್ತಿಯನ್ನು ಉಡುಪಿ, ಕೊಡಗು, ಚಿಕ್ಕಮಗಳೂರು, ಮೈಸೂರು ಜಿಲ್ಲೆಗಳ ಸಹಿತ 5 ಜಿಲ್ಲೆಗಳಿಗೆ ವ್ಯಾಪಿಸಿರುತ್ತದೆ. ಸಂಘವು 2020-21ನೇ ಆರ್ಥಿಕ ಸಾಲಿನಲ್ಲಿ ಇಂದಿನವರೆಗೆ ರೂ. 120 ಕೋಟಿಗೂ ಮಿಕ್ಕಿ ಠೇವಣಿಯನ್ನು ಹೊಂದಿದ್ದು ಇದನ್ನು ಮಾರ್ಚ್ ಅಂತ್ಯಕ್ಕೆ ರೂ. 150 ಕೋಟಿ ಠೇವಣಿ ಸಂಗ್ರಹದ ಗುರಿಯನ್ನು ಸಾಧಿಸಿ ಇನ್ನೂ 2 ಶಾಖೆಗಳನ್ನು ತೆರೆಯಲಿದೆ ಎಂದು ಸಭೆಗೆ ತಿಳಿಸಿದರು. ಸಂಘವು ರೂ. 134.98 ಲಕ್ಷ ನಿವ್ವಳ ಲಾಭಗಳಿಸಿರುವುದು ಸಂಘದ ಹೆಗ್ಗಳಿಕೆ. ಸಂಘದ ಸದಸ್ಯರಿಗೆ ಶೇ. 15 ರಷ್ಟು ಡಿವಿಡೆಂಡ್‌ನ್ನು ಈ ಸಭೆಯಲ್ಲಿ ಘೋಷಿಸಿದರು.

ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಘದ ನಿರ್ದೇಶಕರಾದ ಶ್ರೀ ವಾಮನ್.ಕೆ, ಶ್ರೀ ರಾಮ್‌ದಾಸ್ ಮರೋಳಿ, ಶ್ರೀ ಜಿ. ಪರಮೇಶ್ವರ ಪೂಜಾರಿ, ಶ್ರೀ ಆನಂದ ಎಸ್. ಕೊಂಡಾಣ, ಶ್ರೀ ಸುರೇಶ್ ವಿ. ಪೂಜಾರಿ, ಶ್ರೀ ಸೀತಾರಾಮ ಎನ್, ಶ್ರೀ ರಮಾನಾಥ ಸನಿಲ್, ಶ್ರೀ ಚಂದ್ರಹಾಸ ಮರೋಳಿ, ಶ್ರೀಮತಿ ಸುಜಯ ಹೇಮಚಂದ್ರ ಮತ್ತು ಶ್ರೀಮತಿ ಕುಶಾಲಾಕ್ಷಿ ಯಶವಂತ್ ಉಪಸ್ಥಿತರಿದ್ದರು. ಉಪಾಧ್ಯಕ್ಷರಾದ ಶ್ರೀ ನೇಮಿರಾಜ್ ಪಿ. ರವರು ಕೊನೆಯಲ್ಲಿ ವಂದಿಸಿದರು.

# ಮೊಬೈಲ್ ಆ್ಯಪ್ ಮೂಲಕ ಸಾಲದ ಆಮಿಷ ಒಡ್ಡುವ ಜಾಲದ ಬಗ್ಗೆ ಆರ್.ಬಿ.ಐ. ಎಚ್ಚರಿಕೆ

**ಮೀಟರ್ ಬಡ್ಡಿ ಸಾಲ ನೀಡುವವರೂ ಈಗ ಅವರ ವ್ಯವಹಾರಕ್ಕೂ ಡಿಜಿಟಲ್ ಸ್ಪರ್ಶ ಸಿಕ್ಕಿದೆ. ಮನೆ ಮನೆಗೆ ಹೋಗಿ ಸಾಲ ನೀಡುವ ಬದಲು ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ, ಸೆಕೆಂಡ್‌ಗಳಲ್ಲಿ ಸಾಲ ಪಡ್ಕೊಳ್ಳಿ ಅಂತ ಹೇಳೋಕೆ ಶುರುಮಾಡಿದ್ದಾರೆ. ಆದ್ದರಿಂದ ತತ್‌ಕ್ಷಣದ ಹಣಕಾಸಿನ ಮುಗ್ಗಟ್ಟಿನಿಂದ ಚೇತರಿಸಿಕೊಳ್ಳಲು ಮೊಬೈಲ್ ಆ್ಯಪ್‌ಗೆ ಲಾಗಿನ್ ಆಗಿ ಸುಲಭವಾಗಿ ಒಂದೇ ಕ್ಲಿಕ್‌ನಲ್ಲಿ ಸಾಲ ಪಡೆಯಬಹುದು. ಇನ್ನೇಕೆ ತಡ ಎಂದು ಹಿಂದೆ ಮುಂದೆ ಯೋಚಿಸದೇ ಸಾಲ ಪಡೆದುಕೊಳ್ಳಬೇಡಿ. ಈ ರೀತಿ ಸಾಲ ತಗೊಂಡ್ರೆ ಸಂಕಷ್ಟಕ್ಕೆ ಸಿಲುಕೋದು ಗ್ಯಾರೆಂಟಿಯಾಗಿದೆ.**




**ಮುಂಬೈ :** ಸಾಲ ನೀಡುವುದಾಗಿ ಆಮಿಷ ಒಡ್ಡುವ ಕೆಲವು ಅನಧಿಕೃತ ಮೊಬೈಲ್ ಆಪ್‌ಗಳ ಜಾಲಕ್ಕೆ ಬಲಿಯಾಗಬಾರದು ಎಂದು ಆರ್‌ಬಿಐ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ. ಸಾಲ ಕೊಡುವುದಾಗಿ ಹೇಳುವ ಇಂತಹ ಆಪ್‌ಗಳ ಸಂಖ್ಯೆ ಹೆಚ್ಚುತ್ತಿದೆ ಎಂದೂ ಅದು ಹೇಳಿದೆ. ಸಾಲವನ್ನು ತಕ್ಷಣಕ್ಕೆ, ಯಾವುದೇ ತೊಂದರೆಗಳು ಇಲ್ಲದೆ ನೀಡುವುದಾಗಿ ಹೇಳುವ ಇಂತಹ ಆಪ್‌ಗಳ ಜಾಲದಲ್ಲಿ ಸಾರ್ವಜನಿಕರು ಹಾಗೂ ಕೆಲವು ಸಣ್ಣ ಉದ್ದಿಮೆಗಳು ಸಿಲುಕಿರುವ ವರದಿಗಳು ಇವೆ ಎಂದು ಕೂಡ ಆರ್.ಬಿ.ಐ. ಪ್ರಕಟಣೆ ತಿಳಿಸಿದೆ.

ಮೀಟರ್ ಬಡ್ಡಿ ಸಾಲ ನೀಡುವವರೂ ಈಗ ಅವರ ವ್ಯವಹಾರಕ್ಕೂ ಡಿಜಿಟಲ್ ಸ್ಪರ್ಶ ಸಿಕ್ಕಿದೆ. ಮನೆ ಮನೆಗೆ ಹೋಗಿ ಸಾಲ ನೀಡುವ ಬದಲು ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ, ಸೆಕೆಂಡ್‌ಗಳಲ್ಲಿ ಸಾಲ ಪಡ್ಕೊಳ್ಳಿ ಅಂತ ಹೇಳೋಕೆ ಶುರುಮಾಡಿದ್ದಾರೆ. ಆದ್ದರಿಂದ ತತ್‌ಕ್ಷಣದ ಹಣಕಾಸಿನ ಮುಗ್ಗಟ್ಟಿನಿಂದ ಚೇತರಿಸಿಕೊಳ್ಳಲು ಮೊಬೈಲ್ ಆ್ಯಪ್‌ಗೆ ಲಾಗಿನ್ ಆಗಿ ಸುಲಭವಾಗಿ ಒಂದೇ ಕ್ಲಿಕ್‌ನಲ್ಲಿ ಸಾಲ ಪಡೆಯಬಹುದು. ಇನ್ನೇಕೆ ತಡ ಎಂದು ಹಿಂದೆ ಮುಂದೆ ಯೋಚಿಸದೇ ಸಾಲ ಪಡೆದುಕೊಳ್ಳಬೇಡಿ. ಈ ರೀತಿ ಸಾಲ ತಗೊಂಡ್ರೆ ಸಂಕಷ್ಟಕ್ಕೆ ಸಿಲುಕೋದು ಗ್ಯಾರೆಂಟಿಯಾಗಿದೆ.

**ಸಮಸ್ಯೆ ಆದ್ರೆ ದೂರು ಕೊಡಿ :** ಗುರುತು ಪರಿಚಯವಿಲ್ಲದ ಆ್ಯಪ್‌ಗಳ ಮೂಲಕ ಸಾಲ ಪಡೆದುಕೊಂಡರೆ ನಿಮ್ಮ ಕೆವೈಸಿ ದಾಖಲೆಗಳು ಯಾರದ್ದೋ ಕೈ ಸೇರುತ್ತದೆ. ಅವರು ಅದನ್ನು ಬೇರೆ ರೀತಿಯಲ್ಲಿ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ಇಂತಹ ಆ್ಯಪ್‌ಗಳು ಗಮನಕ್ಕೆ ಬಂದರೆ ಅಥವಾ ಇಂತಹ ಆ್ಯಪ್‌ಗಳಲ್ಲಿ ಸಾಲ ಪಡೆದು ತೊಂದರೆ ಒಳಗಾಗಿದ್ದರೆ https://sachet.rbi.org.in ಜಾಲತಾಣದಲ್ಲಿ ದೂರು ದಾಖಲಿಸಬಹುದು ಎಂದು ಆರ್‌ಬಿಐ ತಿಳಿಸಿದೆ.

ಈ ಬಹುತೇಕ ಆ್ಯಪ್‌ಗಳು ಅನಧಿಕೃತ. ಸಾಲ ನೀಡುವುದಕ್ಕೆ ಮತ್ತು ಹಿಂಪಡೆಯುವ ವಹಿವಾಟು ನಡೆಸುವುದಕ್ಕೆ ಅವುಗಳು ಪರವಾನಗಿ ಹೊಂದಿಲ್ಲ. ತ್ವರಿತವಾಗಿ ನಿಮ್ಮ ಬ್ಯಾಂಕ್ ಖಾತೆಗೆ ಹಣ ಜಮೆಯಾಗುತ್ತದೆ. ಆದರೆ, ನಂತರ ಸಮಸ್ಯೆಗಳು ಶುರುವಾಗುತ್ತವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಾರ್ವಜನಿಕರನ್ನು ಎಚ್ಚರಿಸಿದೆ. ಸಾರ್ವಜನಿಕರಿಂದ ಈ ಬಗ್ಗೆ ವೈಯಕ್ತಿಕವಾಗಿ ಬರುತ್ತಿರುವ ದೂರುಗಳ ಸಂಖ್ಯೆ ಹೆಚ್ಚಾದ ಕಾರಣ ಆರ್‌ಬಿಐ ಈ ಎಚ್ಚರಿಕೆ ಸಂದೇಶ ಪ್ರಕಟಿಸಿದೆ. ಮೀಟರ್ ಬಡ್ಡಿ ಅಷ್ಟೇ ಅಲ್ಲ, ವಿವಿಧ ರೀತಿಯ ಶುಲ್ಕಗಳನ್ನೂ ಇಂತಹ ಆ್ಯಪ್‌ಗಳು ವಿಧಿಸುತ್ತಿದ್ದು, ರಹಸ್ಯ ಶುಲ್ಕಗಳೂ ಇರುವ ಕಾರಣ ಸಾಲ ಹೊರೆಯಾಗಿ ಪರಿಣಮಿಸುತ್ತದೆ. ಈ ಬಗ್ಗೆ ಎಚ್ಚರವಿರಲಿ. ಬ್ಯಾಂಕುಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ವಹಿವಾಟಿನ ಸಂಸ್ಥೆಗಳಿಗಷ್ಟೇ ಕಾನೂನು ಬದ್ಧ ಸಾಲ ವಿತರಣೆಗೆ ಅವಕಾಶವಿರುವಂಥದ್ದು ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

**ಆರ್‌ಬಿಐ ಕಿವಿಮಾತು**

* ಕೆವೈಸಿ ದಾಖಲೆಗಳನ್ನು ಅಪರಿಚಿತ ವ್ಯಕ್ತಿಗಳ ಜೊತೆ ಅಥವಾ ಅನಧಿಕೃತ ಆ್ಯಪ್‌ಗಳ ಜೊತೆ ಹಂಚಿಕೊಳ್ಳಬಾರದು. ಇಂತಹ ಆ್ಯಪ್‌ಗಳ ಬಗ್ಗೆ ಕಾನೂನು ಸಂಸ್ಥೆಗಳಿಗೆ ಮಾಹಿತಿ ನೀಡಬಹುದು.
* ವೆಬ್‌ಸೈಟ್‌ಗೆ ಭೇಟಿ ನೀಡಿ ದೂರು ಸಲ್ಲಿಸಬಹುದು.
* ಬ್ಯಾಂಕುಗಳ ಹಾಗೂ ಎನ್‌ಬಿಎಫ್‌ಸಿಗಳ ಪರವಾಗಿ ಬಳಕೆಯಾಗುವ, ಸಾಲ ಕೊಡುವ ಆ್ಯಪ್‌ಗಳ ತಮ್ಮ ಬ್ಯಾಂಕ್ ಅಥವಾ ಎನ್‌ಬಿಎಫ್‌ಸಿ ಹೆಸರನ್ನು ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಬೇಕು.
* ನೋಂದಾಯಿತ ಎನ್‌ಬಿಎಫ್‌ಸಿಗಳ ಹೆಸರುಗಳನ್ನು ಆರ್‌ಬಿಐ ವೆಬ್‌ಸೈಟ್ ಮೂಲಕ ತಿಳಿದುಕೊಳ್ಳಬಹುದು.

# ಸುಗ್ಗಿಯ ಹಬ್ಬ : ಸಂಕ್ರಾಂತಿ

ರೈತರ ಹಬ್ಬ; ಜನಪದರ ಹಬ್ಬ– "ಸುಗ್ಗಿಯ ಬರಿಸಿ ಬಂದವಳೆ ಸಂಕ್ರಾಂತಮ್ಮ. ಸುಗ್ಗಿಯ ಹಿಗ್ಗು ಎಲ್ಲಾ ಕಸುಬಿನ ಜನಕೆ. ಒಟ್ಟಾಗಿ ಬನ್ನಿ ತಾಯಿ ಪೂಜೆಗೆ." ಎಂದು ಜನಪದರು ತುಂಬ ಹೃದಯದಿಂದ ಎಲ್ಲರನ್ನೂ ತಾಯಿಯ ಪೂಜೆಯಲ್ಲಿ ಪಾಲ್ಗೊಳ್ಳಲು ಕರೆಯುತ್ತಾರೆ. ರೈತ ಮಕ್ಕಳಿಗೆ ಇದು ಸುಗ್ಗಿಯ ಸಂಭ್ರಮದ ಕಾಲ. ಬೆಳೆಗಳನ್ನು ಕೊಯ್ಲು ಮಾಡಿ, ಕಣದಲ್ಲಿ ಹಾಕಿ ಶುದ್ಧಮಾಡಿ ದವಸ–ಧ್ಯಾನ್ಯಗಳನ್ನು ಮನೆ ತುಂಬಿಸಿಕೊಳ್ಳುವ ಸಂತಸದ ಸಮಯ. ಹಿಡಿಯಾಗಿ ಬಿತ್ತಿದ ಕಾಳುಗಳನ್ನು ಚೀಲಗಟ್ಟಲೆ ತುಂಬಿಕೊಟ್ಟ ಭೂತಾಯಿಗೆ ಕೃತಜ್ಞತೆ ಸಲ್ಲಿಸುವ ಹಬ್ಬ ಸಂಕ್ರಾಂತಿ. ಜೊತೆಗೆ ಕೃಷಿ ಕಾಯಕದಲ್ಲಿ ತಮ್ಮೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದ ಜಾನವಾರುಗಳಿಗೂ ಋಣ ತೀರಿಸುವ ಹಬ್ಬ. ಎತ್ತುಗಳ ಮೈತೊಳೆದು, ಕೊಂಬು ಸವರಿ, ಬಣ್ಣ ಬಳೆದು ಊರಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಕೊನೆಯಲ್ಲಿ ಊರಿನ ಪ್ರಮುಖ ಜಾಗದಲ್ಲಿ ಹಾಕಿದ್ದ ಬೆಂಕಿಯ ಕಿಚ್ಚನ್ನು ದಾಟಿಸುವ ಪದ್ಧತಿ ಇದೆ. ಇದಕ್ಕೆ "ಕಿಚ್ಚು ಹಾಯಿಸುವಿಕೆ" ಎನ್ನುತ್ತಾರೆ. ಇದರಿಂದ ಪಶುಗಳ ಮೈಗಂಟಿಕೊಂಡಿದ್ದ ಕ್ರಿಮಿಕೀಟಗಳು ಬೆಂಕಿಯ ಝಳಕ್ಕೆ ಸತ್ತು ಹೋಗುತ್ತವೆ ಎಂಬ ನಂಬಿಕೆ ಇದೆ.

ತಮಿಳುನಾಡಿನಲ್ಲಿಯೂ ಇದು ಸುಗ್ಗಿಯ ಹಬ್ಬವೇ ಆಗಿದ್ದು ಇದನ್ನು "ಪೊಂಗಲ್" ಎಂದು ಕರೆಯುತ್ತಾರೆ. ಇದು ಮನೆಯಲ್ಲಿ ರೈತರು ತಾವು ಬೆಳೆದ ಧವಸದಾನ್ಯಗಳನ್ನು ತುಂಬಿಸಿ ಕೊಳ್ಳುವ ಸಮಯ. ಇದೇ ಖುಷಿಯಲ್ಲಿ ಹೊಸ ಮಣ್ಣಿನ ಮಡಕೆಗಳಲ್ಲಿ ಆ ವರ್ಷ ಬೆಳೆದ ಹೊಸ ಅಕ್ಕಿ–ಹಾಲನ್ನು ಹಾಕಿ ಕುದಿಸಿ ಉಕ್ಕಿಸಲಾಗುತ್ತದೆ. ಇದು ಅಭಿವೃದ್ಧಿ–ಸುಖ–ಶಾಂತಿಗಳ ಸಂಕೇತ. ಸೂರ್ಯಾರಾಧನೆ ಪ್ರಮುಖವಾಗಿದ್ದು, ಬಂಧು–ಮಿತ್ರಾದಿಗಳ ಮನೆಮನೆಗೆ ಹೋಗಿ ಶುಭಾಶಯ ಕೋರುತ್ತಾರೆ.

ಆದರೆ, ಈ ವರ್ಷ ಅನ್ನದಾತನಿಗೆ ಈ ಸಂಭ್ರಮ ಇಲ್ಲವೆಂದೇ ಹೇಳಬೇಕು. ಈ ವರ್ಷ ಅನ್ನದಾತನ ಮೇಲೆ ಪ್ರಕೃತಿ ತಾಯಿ ಮುನಿದುಕೊಂಡಳು. ಮಳೆರಾಯ ಹಿಂಗಾರು– ಮುಂಗಾರುಗಳೆರಡರಲ್ಲೂ ಮಳೆ ಸುರಿಸಲಿಲ್ಲ. ಹೀಗಾಗಿ ಸುಗ್ಗಿಯ ಕಾಳು ಕಣ ತುಂಬಲಿಲ್ಲ. ರಾಶಿ ಮಾಡಲಿಲ್ಲ. ಸುಗ್ಗಿಯ ಸಂಭ್ರಮ ಕಾಣಲಿಲ್ಲ. ಈಗ ಸರಕಾರದ ಸಹಾಯ ಕೋರಿ ಕೈಚಾಚಿ ನಿಂತಿದ್ದಾನೆ. ತನಗಿಲ್ಲದಿದ್ದರೂ ನಡೆದೀತು ದನಕರುಗಳಿಗೆ





[illegible] ಉತ್ಸವ ಮಾಡಿ ಮಜಾ ಮಾಡುವುದು ಎಂಬುದೇ ಇಂದಿನ ಬಹಳಷ್ಟು ಜನರ ಅರ್ಥವಾಗಿದೆ. ಅವುಗಳಲ್ಲಿರುವ ಸಾಂಸ್ಕೃತಿಕ ಪ್ರಯೋಜನಗಳು, ಸಾಮಾಜಿಕ ಸಾರ್ಥಕತೆಯ ಆಚರಣೆಗಳು, ಮಾನವತೆ ಮೆರೆಯುವ ಅಂಶಗಳು, ಭಾವೈಕ್ಯತೆ ಬೆಳೆಸುವ ನುಡಿಗಟ್ಟುಗಳ ನಿಜಾರ್ಥಗಳು, ಧಾರ್ಮಿಕ ಪರಂಪರೆಯ ಹಿರಿಮೆಗಳು ನಮ್ಮ ಕಣ್ಣಿಗೆ ಬೀಳುತ್ತಿಲ್ಲ. ಈ ಮನೋಸ್ಥಿತಿ ಹೀಗೇ ಮುಂದುವರೆದರೆ ನಾವು ನಮ್ಮ ಮುಂದಿನ ಪೀಳಿಗೆಯನ್ನು ನಮ್ಮ ಭವ್ಯ ಸಂಸ್ಕೃತಿ–ಪರಂಪರೆಗಳಿಂದ ವಂಚಿತರನ್ನಾಗಿ ಮಾಡಿದ ಅಪರಾಧಿಗಳಾಗುತ್ತೇವೆ. ಬನ್ನಿ, ಸಮಾಜದಲ್ಲಿ ಸಮಾನತೆ ಸಾಧಿಸಲು ನೆರವಾಗುವ, ದುಡಿಮೆಯ ಶ್ರಮವನ್ನು, ಬದುಕಿನ ಬೇಸರವನ್ನು ಕಳೆದು, ಮನಸ್ಸಿಗೆ ಹೊಸ ಚೈತನ್ಯ ನೀಡುವ ಹಬ್ಬಗಳನ್ನು ಅರಿತು ಆಚರಿಸೋಣ.

**– ಎನ್.ಅರ್.ಪಾಟೀಲ್, ಬೆಳಗಾವಿ**





# ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮಂಗಳೂರು-ವಾರ್ಷಿಕ ಸಭೆ




ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯು 2019–20ನೇ ಸಾಲಿನಲ್ಲಿ ರೂ.6.22 ಕೋಟಿ ನಿವ್ವಳ ಲಾಭ ಗಳಿಸಿದ್ದು, ಲಾಭ ವಿಂಗಡಣೆಯಲ್ಲಿ ಸದಸ್ಯರಿಗೆ ಶೇ.25 ಡಿವಿಡೆಂಡ್‌ನ್ನು ನೀಡಲು ಮಹಾಸಭೆಯು ನಿರ್ಧರಿಸಿದೆ ಎಂದು ಸಂಘದ ಅಧ್ಯಕ್ಷರಾದ ಶ್ರೀ ಕೆ.ಜೈರಾಜ್ ಬಿ.ರೈಅವರು ತಿಳಿಸಿದ್ದಾರೆ.

**ಅರ್ಧ ವಾರ್ಷಿಕ ವರದಿ :** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಿತ ಸಹಕಾರ ಸಂಸ್ಥೆಯಾದ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ 2020–21ನೇ ಸಾಲಿನ ಅರ್ಧ ವಾರ್ಷಿಕ ಅವಧಿ 30.09.2020ಕ್ಕೆ ಅತ್ಯುತ್ತಮ ಪ್ರಗತಿಯನ್ನು ದಾಖಲಿಸಿದೆ. 30.09.2020ರ ಅರ್ಧ ವಾರ್ಷಿಕ ಅವಧಿಗೆ ಠೇವಣಾತಿಯು ರೂ.263 ಕೋಟಿ, ಸಾಲ ಮತ್ತು ಮುಂಗಡ ರೂ.223 ಕೋಟಿಯೊಂದಿಗೆ ಒಟ್ಟು ವ್ಯವಹಾರವು ರೂ.486 ಕೋಟಿಯಾಗಿರುತ್ತದೆ. 2019–20ನೇ ಸಾಲಿನಲ್ಲಿ ರೂ.6.22 ಕೋಟಿ ನಿವ್ವಳಲಾಭ ಗಳಿಸಿದೆ.



**ಆಯ್ಕೆ :** ಕಾಮಧೇನು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬಿಡದಿ ಬೆಂಗಳೂರು ಇದರ ಆಧ್ಯಕ್ಷರಾಗಿ ಶ್ರೀ ಎಸ್.ಶೇಖರ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಕೆ.ಕೃಷ್ಣಮೂರ್ತಿರವರು ಆಯ್ಕೆಯಾಗಿರುತ್ತಾರೆ.

## ವಿಧಾನ ಪರಿಷತ್ ಉಪಸಭಾಪತಿ, ಸಹಕಾರಿ ಎಸ್.ಎಲ್. ಧರ್ಮೇಗೌಡ ನಿಧನ



**ಬೆಂಗಳೂರು :** ಹಿರಿಯ ಸಹಕಾರಿ ಮುಖಂಡರು, ಕರ್ನಾಟಕ ವಿಧಾನ ಪರಿಷತ್ತಿನ ಉಪಸಭಾಪತಿಗಳಾಗಿದ್ದ ಎಸ್.ಎಲ್. ಧರ್ಮೇಗೌಡ ಅವರು ದಿನಾಂಕ: 28.12.2020 ರಂದು ನಿಧನರಾದರು. ಶ್ರೀಯುತರು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾಗಿ, ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ, ವಿವಿಧ ಸಹಕಾರ ಸಂಸ್ಥೆಗಳಲ್ಲಿ ನಿರ್ದೇಶಕರಾಗಿಯೂ ಸಹಕಾರ ಕ್ಷೇತ್ರದ ಬಲವರ್ಧನೆಗೆ ಮಾರ್ಗದರ್ಶನ ಮಾಡಿರುತ್ತಾರೆ.

ವಿಧಾನ ಸಭೆಯ ಸದಸ್ಯರಾಗಿ, ಪ್ರಸ್ತುತ ವಿಧಾನ ಪರಿಷತ್ತಿನ ಸದಸ್ಯತ್ವದ ಜೊತೆಗೆ ಉಪಸಭಾಪತಿಗಳಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಎಸ್.ಎಲ್. ಧರ್ಮೇಗೌಡ ಅವರ ನಿಧನಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಸಭಾಪತಿ ಪ್ರತಾಪಚಂದ್ರ ಶೆಟ್ಟಿ, ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡ, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ ಸದಾನಂದಗೌಡ, ಸಹಕಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಸೇರಿದಂತೆ ರಾಜಕೀಯ ಮುಖಂಡರುಗಳು, ಸಹಕಾರಿ ಮುಖಂಡರುಗಳು ತೀವ್ರ ಸಂತಾಪ ಸೂಚಿಸಿ, ಅವರ ಕುಟುಂಬಕ್ಕೆ ನೋವುಗಳನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.



# ರಾಷ್ಟ್ರ ಧ್ವಜದ ಬಗ್ಗೆ ಪ್ರತಿಯೊಬ್ಬರೂ ತಿಳಿದಿರಲೇಬೇಕಾದ ಸಾಮಾನ್ಯ ಸಂಗತಿಗಳು

ಭಾರತದ ರಾಷ್ಟ್ರೀಯ ಧ್ವಜದ ಈಗಿನ ಅವತರಣಿಕೆಯನ್ನು ಜುಲೈ 22, 1947ರ ಸಂವಿಧಾನ ಸಭೆಯಲ್ಲಿ ಅಂಗೀಕರಿಸಲಾಯಿತು. ಬ್ರಿಟಿಷರಿಂದ ಆಗಸ್ಟ್ 15, 1947ರಲ್ಲಿ ಸ್ವಾತಂತ್ರ್ಯ ಪಡೆಯುವ ಕೆಲವೇ ದಿನಗಳ ಮುಂಚೆ ನಡೆದದ್ದು ಈ ಸಭೆ. ಅಂದಿನಿಂದ ಜನವರಿ 26 1950 ರವರೆಗೆ ಸ್ವತಂತ್ರ ಭಾರತದ ಸ್ವರಾಜ್ಯಭಾರದ ಬಾವುಟವಾಗಿಯೂ, 26, ಜನವರಿ, 1950ರಿಂದ ಗಣರಾಜ್ಯ ಭಾರತದ ಬಾವುಟವಾಗಿಯೂ ಸಂದಿದೆ. ಹಿಂದಿ ಭಾಷೆಯಲ್ಲಿ ತಿರಂಗಾ, ಕನ್ನಡದಲ್ಲಿ ತ್ರಿವರ್ಣ – ಮೂರು ವರ್ಣಗಳ ಧ್ವಜವೆಂದು ಸೂಚಿಸುವ ಪದಗಳು ಭಾರತದ ಬಾವುಟವನ್ನು ಸೂಚಿಸುವಾಗ ಬಳಕೆಯಲ್ಲಿದೆ.

### ನಮ್ಮ ರಾಷ್ಟ್ರ ಧ್ವಜದ ಬಣ್ಣಗಳ ವಿಶೇಷತೆ

- **ಕೇಸರಿ :** ತ್ರಿವರ್ಣ ಧ್ವಜದಲ್ಲಿ ಮೇಲೆ ಇರುವ ಕೇಸರಿ ಬಣ್ಣ ಧೈರ್ಯ, ಪರಿತ್ಯಾಗ ಮತ್ತು ದೇಶದ ಒಳಿತಿಗಾಗಿ ನಡೆಯುವ ಬಲಿದಾನಗಳ ಸಂಕೇತವಾಗಿದೆ.
- **ಬಿಳಿ :** ಧ್ವಜದ ಮಧ್ಯೆ ಇರುವ ಬಿಳಿ ಬಣ್ಣ ಸತ್ಯ, ಶಾಂತಿ ಮತ್ತು ಶುದ್ಧತೆಯ ಸಂಕೇತವಾಗಿದೆ. ಆ ಮೂಲಕ ಶುದ್ಧ ಮನಸ್ಸಿನವರೊಡನೆ ನಿತ್ಯವೂ ಸತ್ಯ ಶಾಂತಿಗಳೊಂದಿಗೆ ನಮ್ಮನ್ನು ಬೆಳಕಿನೆಡೆಗೆ ಕೊಂಡೊಯ್ಯುವ ಸತ್ಯ ಮಾರ್ಗದ ಸಂಕೇತ ಬಿಳಿ.
- **ಹಸಿರು :** ಕೆಳಗೆ ಇರುವ ಹಸಿರು ಬಣ್ಣ ಪ್ರಗತಿಯ ಸಂಕೇತವೂ ಹೌದು. ಜೊತೆಗೆ ಮನುಷ್ಯ ಮತ್ತು ಪ್ರಕೃತಿಯ ನಡುವಿನ ಅವಿನಾಭಾವ ಸಂಬಂಧವನ್ನು ತಿಳಿಸುತ್ತದೆ. ವಿಶಾಲವಾದ ಈ ಪ್ರಕೃತಿಯಲ್ಲಿ ಮನುಷ್ಯ ಅತಿಥಿಯಷ್ಟೇ. ಹಾಗಾಗಿ ಪ್ರಕೃತಿಯೊಡನೆ ಬೆರೆತು ಹಚ್ಚ ಹಸಿರಿನ ಒಡಲಿಗೆ ತೊಂದರೆ ಉಂಟು ಮಾಡದೆ ಅದರ ಅಸ್ತಿತ್ವವನ್ನು ಕಾಪಾಡಿಕೊಂಡು ಬರಬೇಕು. ಜೊತೆಗೆ ಪ್ರಕೃತಿಯಲ್ಲಿರುವ ಸಕಲ ಜೀವರಾಶಿಯ ಜೊತೆ ಮನುಷ್ಯ ಬಾಂಧವ್ಯದಿಂದ ಇರಬೇಕು ಎನ್ನುವುದನ್ನು ಸೂಚಿಸುತ್ತದೆ.
- **ಅಶೋಕ ಚಕ್ರ :** ಅಂದಹಾಗೆ, ನಮ್ಮ ತ್ರಿವರ್ಣಧ್ವಜ ರೂಪುಗೊಂಡಿದ್ದು 1931ರಲ್ಲಿ. ಸ್ವಾತಂತ್ರ್ಯ ಪೂರ್ವದಲ್ಲಿ ತ್ರಿವರ್ಣ ಧ್ವಜದ ಮಧ್ಯೆ ಮಹಾತ್ಮ ಗಾಂಧೀಜಿ ಅವರ ಚರಕವನ್ನು ಅಳವಡಿಸಲಾಗಿತ್ತು. ಆದರೆ ನಂತರ ಜುಲೈ 22, 1947ರಲ್ಲಿ ಚರಕದ ಬದಲಾಗಿ ವೃತ್ತಾಕಾರದಲ್ಲಿರುವ ಅಶೋಕ ಚಕ್ರವನ್ನು ಬಳಸಿ, ಕೇಸರಿ ಬಿಳಿ ಹಸಿರು ಬಣ್ಣದ ಧ್ವಜದ ಮಧ್ಯೆ ಅಶೋಕಚಕ್ರ ಇರುವ ರಾಷ್ಟ್ರಧ್ವಜವನ್ನು ಸಂವಿಧಾನಬದ್ಧವಾಗಿ ಅಂಗೀಕರಿಸಲಾಯಿತು. ಅಶೋಕ ಚಕ್ರವು ಬೌದ್ಧ ದೊರೆ ಸಾಮ್ರಾಟ್ ಅಶೋಕನ ಚಿಹ್ನೆಯಾಗಿದ್ದು, ರಾಷ್ಟ್ರಧ್ವಜದಲ್ಲಿರುವ ಈ ಚಕ್ರವು ಧರ್ಮವನ್ನು ಪ್ರತಿನಿಧಿಸಿದರೆ ಆ ಚಕ್ರದ ಮಧ್ಯೆ ಇರುವ 24 ಗೆರೆಗಳು ವಿವಿಧ ಆಚರಣೆ, ಸಂಸ್ಕೃತಿ, ವಿವಿಧತೆಯಂತಹ ಬಹುತ್ವವನ್ನು ಪ್ರತಿನಿಧಿಸುತ್ತದೆ.

### ತ್ರಿವರ್ಣ ಧ್ವಜದ ವೈಶಿಷ್ಟ್ಯ :

ತ್ರಿವರ್ಣ ಧ್ವಜ ಅಗಲದುದ್ದಕ್ಕೂ ಮೇಲೆ ಕೇಸರಿ ಬಣ್ಣ, ಮಧ್ಯದಲ್ಲಿ ಬಿಳಿ ಬಣ್ಣ, ಕೊನೆಯಲ್ಲಿ ಹಸಿರು ಬಣ್ಣದ ಪಟ್ಟಿಗಳಿಂದ ಕೂಡಿದೆ. ಬಾವುಟದ ಮಧ್ಯದಲ್ಲಿ ಇಪ್ಪತ್ತುನಾಲ್ಕು ರೇಖೆಗಳುಳ್ಳ ನೀಲಿಯ ಅಶೋಕ ಚಕ್ರವಿದೆ. ದೇಶದ ವಿಭಿನ್ನ ಜಾತಿ, ಮತ, ಪಂಗಡ ಮತ್ತು ಸಂಸ್ಕೃತಿಯ ಜನರನ್ನು ಒಂದೇ ಧ್ವಜದಡಿ ನಿಲ್ಲಿಸಿ ದೇಶದ ಏಕತೆಯನ್ನು ಸಾರುವ ದಿವ್ಯ ಸಾಧನವೇ ನಮ್ಮ ರಾಷ್ಟ್ರಧ್ವಜ. ಈ ನಮ್ಮ ಸ್ವಾತಂತ್ರ್ಯ ದೇಶದ ಸಂಕೇತವಾಗಿರುವ ರಾಷ್ಟ್ರಧ್ವಜದ ಅವಹೇಳನ ರಾಷ್ಟ್ರದ್ರೋಹವಾಗಿರುತ್ತದೆ.

ಅದರ ಉಳಿವಿಗಾಗಿ ಬಲಿದಾನವಾಗಲು ಸದಾ ಸಿದ್ಧವಾಗಿರುವ ನಾವುಗಳು ಅದರ ಮೇಲಿರುವ ಭಕ್ತಿಯನ್ನೇ ದೇಶಭಕ್ತಿ ಎನ್ನುತ್ತೇವೆ. ಅಂದಿನ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರು 1947 ಜುಲೈ 22 ರಂದು ಅಸೆಂಬ್ಲಿಯಲ್ಲಿ ನಮ್ಮ ರಾಷ್ಟ್ರ ಧ್ವಜವನ್ನು ದೇಶಕ್ಕೆ ಅರ್ಪಿಸಿದರು. ನಮ್ಮ ಸರಕಾರವು ಧ್ವಜ ಕೇವಲ ಕೈ ನೇಯ್ಗೆಯಿಂದಲೇ ಸಿದ್ದವಾದ ಶುದ್ಧ ಖಾದಿಯಿಂದಲೇ ಮಾಡಲ್ಪಟ್ಟಿರಬೇಕು. ಅದು ಉಣ್ಣೆಯ ಅಥವಾ ರೇಷ್ಮೆಯ ಇಲ್ಲವೇ ಹತ್ತಿಯದಾದರೂ ಅಡ್ಡಿಯಿಲ್ಲ. ಆದರೆ ಅದು ಕೈ ನೂಲು ಮತ್ತು ಕೈ ನೇಯ್ಗೆಯದೇ ಆಗಿರಬೇಕು.

ಕೇಸರಿ – ಬಿಳಿ – ಹಸಿರು ಬಣ್ಣಗಳ ಅಳತೆ ಸಮ ಪ್ರಮಾಣದಲ್ಲಿ ಇದ್ದು ನೀಲಿಚಕ್ರವು ಹೆಚ್ಚು ಕಡಿಮೆ ಬಿಳಿ ಬಣ್ಣದ ಅಡ್ಡ ಗೆರೆಗಳಷ್ಟಿದ್ದು, ಅದರಲ್ಲಿ ಇಪ್ಪತ್ತ ನಾಲ್ಕು ರೇಖೆಗಳಿವೆ. ಧ್ವಜದ ಉದ್ದ ಮತ್ತು ಅಗಲ 3:2 ಪ್ರಮಾಣದಲ್ಲಿರ ತಕ್ಕದ್ದು ಎಂದು ತಿಳಿಸಿದೆ. ರಾಷ್ಟ್ರಧ್ವಜ ತಯಾರಿಸುವ ಹಕ್ಕು ಕರ್ನಾಟಕದ ಧಾರವಾಡ ಜಿಲ್ಲೆಯ ಗರಗ ಗ್ರಾಮದಲ್ಲಿ ತಯಾರಿಸಲಾಗುತ್ತದೆ. ಉತ್ತರ ಕರ್ನಾಟಕದಾದ್ಯಂತ ಒಟ್ಟು 52 ಇಂತಹ ಘಟಕಗಳು ರಾಷ್ಟ್ರಧ್ವಜ ನಿರ್ಮಾಣದಲ್ಲಿ ತೊಡಗಿವೆ.

ಭಾರತದ ಸಂವಿಧಾನದಲ್ಲಿ ಉಲ್ಲೇಖದಂತೆ ಮತ್ತು ಭಾರತೀಯ ಸ್ಟಾಂಡರ್ಡ್ಸ್ ಬ್ಯೂರೋದ ನಿಯಮಗಳಿಗೆ ತಕ್ಕಂತೆ ರಾಷ್ಟ್ರಧ್ವಜವನ್ನು ಉತ್ಪಾದಿಸಬೇಕು. ಬ್ಯೂರೋದ ಮಾನದಂಡಕ್ಕೆ ತಕ್ಕಂತೆ ಇಲ್ಲದಿದ್ದರೆ ಉತ್ಪನ್ನವೇ ತಿರಸ್ಕೃತವಾಗುತ್ತದೆ. ನಮ್ಮ ಪವಿತ್ರ ಭಾರತಾಂಬೆಯ ಕೀರ್ತಿಯು ಮುಗಿಲೆತ್ತರಕ್ಕೆ ಏರಲಿ, ಎಲ್ಲಕ್ಕಿಂತ ಶ್ರೇಷ್ಠವಾದ ನಮ್ಮ



ರಾಷ್ಟ್ರದ ಧ್ಯೇಯೋದ್ದೇಶಗಳು ಎಲ್ಲಕ್ಕಿಂತ ಎತ್ತರದಲ್ಲಿ ರಾರಾಜಿಸಲಿ, ಎಂಬ ಸಂಕೇತವನ್ನು ನಾಲ್ಕು ದಿಕ್ಕುಗಳಿಗೂ ತಿಳಿಯಪಡಿಸುವುದೇ ನಮ್ಮ ರಾಷ್ಟ್ರ ಧ್ವಜವನ್ನು ಮೇಲಕ್ಕೆ ಹಾರಿಸುವ ಉದ್ದೇಶ.

### ರಾಷ್ಟ್ರಧ್ವಜ ವಿನ್ಯಾಸ ಮಾಡಿದವರು ಯಾರು?

ದೇಶಾದ್ಯಂತ ಇಂದು ರಾರಾಜಿಸುತ್ತಿರುವ ದೇಶದ ರಾಷ್ಟ್ರದ ಧ್ವಜದ ವಿನ್ಯಾಸ ಮಾಡಿದವರು ಸ್ವಾತಂತ್ರ್ಯ ಹೋರಾಟಗಾರ “ಪಿಂಗಾಳಿ ವೆಂಕಯ್ಯ”. 1876ರ ಆಗಸ್ಟ್ 2ರಂದು ಆಂಧ್ರಪ್ರದೇಶದ (ಈಗಿನ) ಮಚಿಲಿಪಟ್ಟಣಂ ಸಮೀದಪ ಭಟ್ಲಾಪೆನುಮರ್ರು ಎಂಬಲ್ಲಿ ಪಿಂಗಾಳಿ ಜನಿಸಿದ್ದರು. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವ ಘೋಷಿತ ನೂರಾರು ರಾಷ್ಟ್ರಧ್ವಜಗಳನ್ನು ಬಳಸಲಾಗಿತ್ತು. ಕೊನೆಗೆ ಸ್ಪಷ್ಟ ಹಾಗೂ ಅಧಿಕೃತ ವಿನ್ಯಾಸದ ಧ್ವಜ 1947ರಲ್ಲಿ ರೂಪತಳೆದಿತ್ತು. ಪಿಂಗಾಳಿ ವೆಂಕಯ್ಯ ಅವರ ವಿನ್ಯಾಸದಲ್ಲೇ ಸ್ವಲ್ಪ ಬದಲಾವಣೆ ಮಾಡಿ 1947ರಲ್ಲಿ ಅಂಗೀಕರಿಸಲಾಗಿತ್ತು. ಹಿಂದೂ ಪತ್ರಿಕೆಯಲ್ಲಿ ಅಂದು ಪ್ರಕಟವಾದ ವರದಿ ಪ್ರಕಾರ, ಪಿಂಗಾಳಿ ವೆಂಕಯ್ಯ ಅವರೊಬ್ಬ ಭೂ ತಜ್ಞರಾಗಿದ್ದರು, ಕೃಷಿಕ ಹಾಗೂ ಶಿಕ್ಷಣ ಪ್ರೇಮಿಯಾಗಿದ್ದರು. ಆದರೆ 1963ರಲ್ಲಿ ಪಿಂಗಾಳಿ ಬಡತನದಲ್ಲಿಯೇ ಇಹಲೋಕ ತ್ಯಜಿಸಿದ್ದರು. ಅಷ್ಟೇ ಅಲ್ಲ ಇಡೀ ಸಮಾಜವೇ ಅವರನ್ನು ಮರೆತುಬಿಟ್ಟಿತ್ತು. 2009ರಲ್ಲಿ ಕೇಂದ್ರ ಸರ್ಕಾರ ಗೌರವಾರ್ಥವಾಗಿ ಅಂಚೆಚೀಟಿ ಬಿಡುಗಡೆಗೊಳಿಸಿತ್ತು! 2011ರಲ್ಲಿ ಪಿಂಗಾಳಿ ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ಘೋಷಿಸಬೇಕೆಂದು ಪ್ರಸ್ತಾಪ ಸಲ್ಲಿಸಲಾಗಿತ್ತು. ಆದರೆ ಅದು ಈವರೆಗೂ ಈಡೇರಿಲ್ಲ.

### ಗರಗ ಗ್ರಾಮಕ್ಕೆ ರಾಷ್ಟ್ರಧ್ವಜ ತಯಾರಿಸುವ ಹಕ್ಕು :

ರಾಜ್ಯದ ಧಾರವಾಡ ಜಿಲ್ಲೆಯ ಗರಗ ಗ್ರಾಮಕ್ಕೆ ರಾಷ್ಟ್ರಧ್ವಜ ತಯಾರಿಸುವ ಹಕ್ಕು ನೀಡಲಾಗಿದೆ. ಉತ್ತರ ಕರ್ನಾಟಕದಾದ್ಯಂತ ಒಟ್ಟು 52 ಇಂತಹ ಘಟಕಗಳು ರಾಷ್ಟ್ರಧ್ವಜ ನಿರ್ಮಾಣದಲ್ಲಿ ತೊಡಗಿದೆ. ಭಾರತದ ಸಂವಿಧಾನದಲ್ಲಿ ಉಲ್ಲೇಖಿಸಿದಂತೆ ಮತ್ತು ಭಾರತೀಯ ಸ್ಟ್ಯಾಂಡರ್ಡ್ ಬ್ಯೂರೋದ ನಿಯಮಗಳಿಗೆ ತಕ್ಕಂತೆ ರಾಷ್ಟ್ರಧ್ವಜ ಉತ್ಪಾದಿಸಬೇಕು. ಬ್ಯೂರೋದ ಮಾನದಂಡಕ್ಕೆ ತಕ್ಕಂತೆ ಇಲ್ಲದಿದ್ದರೆ ಉತ್ಪನ್ನ(ರಾಷ್ಟ್ರಧ್ವಜ) ತಿರಸ್ಕೃತವಾಗುತ್ತದೆ.

### ನೆನಪಿನಲ್ಲಿಡಬೇಕಾದ 10 ಅಂಶಗಳು :

1. ಭಾರತದ ರಾಷ್ಟ್ರೀಯ ಧ್ವಜ'ದ ಈಗಿನ ಅವತರಣಿಕೆಯನ್ನು ಜುಲೈ 22, 1947ರ ಸಂವಿಧಾನ ಸಭೆಯಲ್ಲಿ ಅಂಗೀಕರಿಸಲಾಯಿತು.
2. ತ್ರಿವರ್ಣ ಧ್ವಜ ಅಗಲದುದ್ದಕ್ಕೂ ಮೇಲೆ ಕೇಸರಿ ಬಣ್ಣ, ಮಧ್ಯದಲ್ಲಿ ಬಿಳುಪು, ಕೊನೆಯಲ್ಲಿ ಹಸಿರು ಬಣ್ಣದ ಪಟ್ಟಿಗಳಿಂದ ಕೂಡಿದೆ.
3. ಬಾವುಟದ ಮಧ್ಯದಲ್ಲಿ ಇಪ್ಪತ್ತುನಾಲ್ಕು ರೇಖೆಗಳುಳ್ಳ ನೀಲಿಯ ಅಶೋಕ ಚಕ್ರವಿದೆ
4. ಪಂಡಿತ್ ಜವಾಹರ್ ಲಾಲ್ ನೆಹರು 1947 ಜುಲೈ 22 ರಂದು ಅಸೆಂಬ್ಲಿಯಲ್ಲಿ ನಮ್ಮ ರಾಷ್ಟ್ರ ಧ್ವಜವನ್ನು ದೇಶಕ್ಕೆ ಅರ್ಪಿಸಿದರು.
5. ನಮ್ಮ ಸರಕಾರವು ಧ್ವಜ ಕೇವಲ ಕೈ ನೆಯ್ಗೆಯಿಂದಲೇ ಸಿದ್ದವಾದ ಶುದ್ಧ ಖಾದಿಯಿಂದಲೇ ಮಾಡಲ್ಪಟ್ಟಿರಬೇಕು.ಅದು ಉಣ್ಣೆಯ ಅಥವಾ ರೇಷ್ಮೆಯ ಇಲ್ಲವೇ ಹತ್ತಿಯದಾದರೂ ಅಡ್ಡಿಯಿಲ್ಲ ಆದರೆ ಅದು ಕೈ ನೂಲು ಮತ್ತು ಕೈ ನೆಯ್ಗೆಯದೇ ಇರಬೇಕು.
6. ಧ್ವಜದ ಉದ್ದ ಮತ್ತು ಅಗಲ 3:2 ಪ್ರಮಾಣದಲ್ಲಿರತಕ್ಕದ್ದು
7. ರಾಷ್ಟ್ರ ಧ್ವಜ ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯ ಗರಗ ಗ್ರಾಮದಲ್ಲಿ ತಯಾರಿಸಲಾಗುತ್ತದೆ.
8. ಭಾರತದ ಸಂವಿಧಾನದಲ್ಲಿ ಉಲ್ಲೇಖದಂತೆ ಮತ್ತು ಭಾರತೀಯ ಸ್ಟಾಂಡರ್ಡ್ಸ್ ಬ್ಯೂರೋದ ನಿಯಮಗಳಿಗೆ ತಕ್ಕಂತೆ ರಾಷ್ಟ್ರಧ್ವಜವನ್ನು ಉತ್ಪಾದಿಸಬೇಕು. ಬ್ಯೂರೋದ ಮಾನದಂಡಕ್ಕೆ ತಕ್ಕಂತೆ ಇಲ್ಲದಿದ್ದರೆ ಉತ್ಪನ್ನವೇ ತಿರಸ್ಕೃತವಾಗುತ್ತದೆ.
9. ಧ್ವಜವನ್ನು ಶೀಘ್ರಗತಿಯಲ್ಲಿ ಏರಿಸಬೇಕು ಮತ್ತು ಇಳಿಸುವಾಗ ನಿದಾನಗತಿಯಲ್ಲಿ ಇಳಿಸಬೇಕು. ಸೂರ್ಯೋದಯದಿಂದ ಹಿಡಿದು ಸೂರ್ಯಾಸ್ತದ ತನಕ ಮಾತ್ರ ಹಾರಿಸಬೇಕು.
10. ವೇದಿಕೆಯ ಮೇಲೆ ಬಳಸುವಂತಿದ್ದಲ್ಲಿ ಸಭಿಕರ ಎದುರಿಗೆ ನಿಂತು ಭಾಷಣ ಮಾಡುವವರ ಬಲಕ್ಕೆ ಧ್ವಜ ಕೋಲಿನಿಂದ ಅದನ್ನು ಹಾರಿಸ ತಕ್ಕದು.

### ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಇತಿಹಾಸ

ಕೆಕೆಜಿಎಸ್ಎಸ್ ಅನ್ನು ನವೆಂಬರ್ 7,1957ರಂದು ಸ್ಥಾಪಿಸಲಾಯಿತು. ಗಾಂಧೀವಾದಿಗಳ ಗುಂಪೊಂದು ಈ ಪ್ರದೇಶದ ಖಾದಿ ಮತ್ತು ಇತರೆ ಗುಡಿ ಕೈಗಾರಿಕೆಗಳ ಬೆಳವಣಿಗೆಗೆ ಒಕ್ಕೂಟವನ್ನು ರಚಿಸಲಾಯಿತು. ವೆಂಕಟೇಶ್ ಮಾಗಡಿ ಮತ್ತು ಶ್ರೀರಂಗ ಕಾಮತ ಎನ್ನುವವರು ಕ್ರಮವಾಗಿ ಮೊದಲ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿದ್ದರು.

ಕರ್ನಾಟಕದ ಸುಮಾರು 58 ಸಂಸ್ಥೆಗಳನ್ನು ಈ ಸಂಘದ ಆಶ್ರಯದಲ್ಲಿ ತರಲಾಯಿತು ಮತ್ತು ಹುಬ್ಬಳ್ಳಿಯಲ್ಲಿ ಪ್ರಧಾನ ಕಚೇರಿಯಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ಇದು 17 ಎಕರೆ ಪ್ರದೇಶದಲ್ಲಿ ಉತ್ಪಾದನಾ ಸೌಲಭ್ಯಗಳ ಜೊತೆಗೆ, ಟೆಕ್ಸ್‌ಟೈಲ್ ವಿದ್ಯಾರ್ಥಿಗಳಿಗೆ ತರಬೇತಿ ಕಾಲೇಜನ್ನು ಸಹ ಹೊಂದಿದೆ. ಖಾದಿ ಉತ್ಪಾದನೆಯೂ 1982ರಲ್ಲಿ ಪ್ರಾರಂಭವಾದರೂ ಧ್ವಜ ಉತ್ಪಾದನೆಯು 2004ರಿಂದ ಕಾರ್ಯಚರಣೆಯನ್ನು ನಿರ್ವಹಿಸಲು ಪ್ರಾರಂಭಿಸಿತು. 10,500 ರೂ.ಗಳ ಹೂಡಿಕೆಯೊಂದಿಗೆ ಪ್ರಾರಂಭವಾದ ಈ ಸಂಘ ಇಂದು ವರ್ಷಕ್ಕೆ ಸರಾಸರಿ 1 ಕೋಟಿ ರೂ.ಗಳ ಮೌಲ್ಯದ ಧ್ವಜಗಳನ್ನು ತಯಾರಿಸುತ್ತದೆ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳವಳಿಯ ಉಗಮ

ಲೇಖನ : ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

**ಸರ್. ಫ್ರೆಡ್ರಿಕ್ ನಿಕೋಲ್ಸನ್ ಮತ್ತು ಡೂಪರನೆಕ್ಸ್ ಇವರಿಬ್ಬರು ನೀಡಿದ್ದ ವರದಿಗಳು 1900 ರಲ್ಲಿ ಭಾರತ ಸರ್ಕಾರದ ಗಮನಕ್ಕೆ ಬಂದವು. ನಂತರ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಕುರಿತು ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಲು 1901 ರಲ್ಲಿ ಸರ್.ಎಡ್ವರ್ಡ್ ಲಾ (Sir, Edward Law) ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಭಾರತದಲ್ಲಿ ಸಹಕಾರ ಚಳವಳಿಯನ್ನು ಪ್ರೋತ್ಸಾಹಿಸುವುದು ಉಚಿತವೆಂದು ಅಭಿಪ್ರಾಯ ಪಟ್ಟು ಗ್ರಾಮೀಣ ಮತ್ತು ಪಟ್ಟಣ ಪತ್ತಿನ ಸಂಸ್ಥೆಗಳ ಸ್ಥಾಪನೆ, ಆಡಳಿತ ಮೇಲ್ವಿಚಾರಣೆ ಮತ್ತು ಕಾನೂನು ಇತ್ಯಾದಿ ಅಂಶಗಳನ್ನು ಒಳಗೊಂಡ ವರದಿಯನ್ನು ನೀಡಿತು. ಭಾರತ ಸರ್ಕಾರವು ಕ್ರಮಗಳನ್ನು ಕೈಗೊಂಡು, 1904ರ ಮಾರ್ಚ್ 25ರಂದು "ಸಹಕಾರ ಪತ್ತಿನ ಸಂಘಗಳ ಕಾಯಿದೆ" (Cooperative Credit Socities Act)ಯನ್ನು ಅಂಗೀಕರಿಸಿತು. ಈ ಕಾಯ್ದೆ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಪತ್ತಿನ ಸಂಘಗಳನ್ನು ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೃಷಿಯೇತರ ಪತ್ತಿನ ಸಂಘಗಳನ್ನು ಸ್ಥಾಪಿಸಿ ಸರಳ ಬಡ್ಡಿದರದಲ್ಲಿ ಸಾಲಗಳನ್ನು ನೀಡುವುದಕ್ಕೆ ಅವಕಾಶವಾಯಿತು. ಇದು ಭಾರತದಲ್ಲಿ ಸಹಕಾರ ಚಳುವಳಿಯು ಅಧಿಕೃತವಾಗಿ ಆರಂಭವಾದುದ್ದಕ್ಕೆ ಸಾಕ್ಷಿ ಆಗಿರುತ್ತದೆ.**

...ಹಿಂದಿನ ಸಂಚಿಕೆಯಿಂದ

**ಭಾರತದಲ್ಲಿ ಸಹಕಾರ ಚಳುವಳಿ :** ಆಧುನಿಕ ಸಹಕಾರ ಚಳುವಳಿಯು ಇಂಗ್ಲೆಂಡ್‌ನಲ್ಲಿ 19ನೇ ಶತಮಾನದ ಮಧ್ಯಭಾಗದಲ್ಲಿ ಆರಂಭವಾಗಿರುತ್ತದೆ. ಇದು ಕ್ರಮೇಣವಾಗಿ ಜಗತ್ತಿನ ಬೇರೆ ಭಾಗಗಳಿಗೂ ವ್ಯಾಪಿಸಿರುತ್ತದೆ. ಇದಕ್ಕೆ ಮುಖ್ಯ ಕಾರಣ ಅಂದು ಶ್ರೀಮಂತರಿಂದ ನಡೆಯುತ್ತಿದ್ದ ಬಡವರ ಶೋಷಣೆ. ಈ ಶೋಷಣೆಯು ಎಲ್ಲಾ ದೇಶಗಳಲ್ಲೂ ಒಂದೇ ರೀತಿ ಇಲ್ಲದಿದ್ದರೂ ಅದರ ಪರಿಣಾಮವಾಗಿ ಬಡವರ, ಕೂಲಿಕಾರರ ಆರ್ಥಿಕ ಮತ್ತು ಸಾಮಾಜಿಕ ಬದುಕು ಕಷ್ಟಕರವಾಗಿತ್ತು.

19ನೇ ಶತಮಾನದಲ್ಲಿ ಜಗತ್ತಿನ ಅನೇಕ ದೇಶಗಳಂತೆ ಭಾರತದಲ್ಲೂ ಬಡತನ, ಅನಕ್ಷರತೆ ಹಾಗೂ ಶೋಷಣೆ ವ್ಯಾಪಕವಾಗಿತ್ತು. ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಮಳೆಯ ಅವಲಂಭನೆಯು ಜನರ, ವಿಶೇಷವಾಗಿ ರೈತರ ಬದುಕನ್ನು ಆರ್ಥಿಕ ಸಂಕಷ್ಟಕ್ಕೀಡು ಮಾಡಿತ್ತು. ಅಂದಿನ ಬ್ರಿಟಿಷ್ ಸರ್ಕಾರದಿಂದ ಗ್ರಾಮೀಣ ಜನರಿಗೆ ಯಾವುದೇ ಸೌಲಭ್ಯಗಳು ಲಭ್ಯವಿರಲಿಲ್ಲ. ಲೇವಾದೇವಿದಾರರು ಬಡ ರೈತರನ್ನು ದುಬಾರಿ ಬಡ್ಡಿ ವಿಧಿಸಿ ಶೋಷಣೆ ಮಾಡುತ್ತಿದ್ದರು. ಸಾಲವನ್ನು ತೀರಿಸಲಾಗದ ರೈತರ ಜಮೀನನ್ನು ತಮ್ಮ ವಶಕ್ಕೆ ಪಡೆದುಕೊಂಡು ಅವರನ್ನು ಬೀದಿ ಪಾಲು ಮಾಡುತ್ತಿದ್ದರು. ಕೃಷಿ ಪ್ರಧಾನವಾದ ಭಾರತದ ಬಡ ರೈತರಿಗೆ ಬೇರೆ ಆದಾಯಗಳ ಮೂಲ ಇರಲಿಲ್ಲ, ಲೇವಾದೇವಿದಾರರ ಕಿರುಕುಳ, ಪದೇ ಪದೇ ಸಂಭವಿಸುತ್ತಿದ್ದ ಬರಗಾಲ ಮತ್ತಿತರ ಕಾರಣಗಳಿಂದ ನೊಂದಿದ್ದ ರೈತರು ಸಹನೆಯನ್ನು ಕಳೆದುಕೊಳ್ಳಲಾರಂಭಿಸಿದರು. 1875ರಲ್ಲಿ ಬಾಂಬೆ ಪ್ರಾಂತದ ಕೆಲವು ಭಾಗಗಳಲ್ಲಿ ರೈತರು ಲೇವಾದೇವಿದಾರರ ವಿರುದ್ಧ ಸಿಡಿದೆದ್ದು ಅವರಿಗೆ ಥಳಿಸಿ ಅವರ ಬಳಿಯಿದ್ದ ಸಾಲದ ಪತ್ರಗಳನ್ನು ವಾಪಾಸ್ಸು ಪಡೆದು ಸುಟ್ಟು ಹಾಕಿದರು. ಹಿಂಸಾರೂಪ ಪಡೆದಿದ್ದ ಪ್ರಕರಣಗಳನ್ನು ಹತೋಟಿಗೆ ತಂದಿದ್ದ ಬ್ರಿಟಿಷ್ ಸರ್ಕಾರವು ಲೇವಾದೇವಿ ವ್ಯವಹಾರವನ್ನು ಕಾನೂನಿನ ಚೌಕಟ್ಟಿಗೆ ತಂದಿತು ಹಾಗೂ ರೈತರಿಗೆ ನೇರವಾಗಿ ಕೃಷಿ ಉದ್ದೇಶಕ್ಕಾಗಿ ಸಾಲವನ್ನು ನೀಡುವ ಚಿಂತನೆ ನಡೆಸಿತು. 1883ರಲ್ಲಿ "ಲ್ಯಾಂಡ್ ಇಂಪ್ರೂಮೆಂಟ್ಸ್ ಲೋನ್ಸ್ ಆಕ್ಟ್ (Land Improvements Loans Act)ನ್ನು ಮತ್ತು 1884ರಲ್ಲಿ "ಅಗ್ರಿಕಲ್ಚರಿಸ್ಟ್ಸ್ ಲೋನ್ಸ್ ಆಕ್ಟ್ (Agriculturists Loans Act)ನ್ನು ಅಂಗೀಕರಿಸಿತು. ಇದರ ಪ್ರಕಾರ ಸರ್ಕಾರವೇ ರೈತರುಗಳಿಗೆ ಭೂ ಅಭಿವೃದ್ಧಿ ಮತ್ತು ಕೃಷಿ ಉತ್ಪಾದನೆಗಾಗಿ ಜಮೀನನ್ನು ಆಧಾರ ಮಾಡಿಕೊಂಡು "ತಕಾವಿ" ಸಾಲಗಳನ್ನು ನೀಡಲು ಆರಂಭಿಸಿತು. ಆದರೆ ಇದು ನಿರೀಕ್ಷಿತ ಯಶಸ್ಸು ನೀಡಲಿಲ್ಲ.

1862ರಲ್ಲಿ ಮದ್ರಾಸ್ ಪ್ರಾಂತೀಯ ಸರ್ಕಾರವು ತನ್ನ ಪ್ರಾಂತದಲ್ಲಿ ಭೂ ಮತ್ತು ವ್ಯವಸಾಯ ಬ್ಯಾಂಕ್‌ಗಳನ್ನು ಸ್ಥಾಪಿಸುವ ಕುರಿತು ಅಧ್ಯಯನ ಮಾಡಿ ವರದಿ ನೀಡಲು ತಿನ್ನೆವೇಲಿ (Tinnaveli) ಜಿಲ್ಲಾಧಿಕಾರಿಯಾಗಿದ್ದ ಸರ್. ಫ್ರೆಡ್ರಿಕ್ ನಿಕೋಲ್ಸನ್ (Sir Fredric Nicholsm) ಇವರನ್ನು ಯುರೋಪ್‌ಗೆ ಕಳುಹಿಸಿತು. ಇವರು 1899ರಲ್ಲಿ ವರದಿಯನ್ನು ನೀಡಿದರು ಹಾಗೂ "ರೈಫಿಜಾನ್‌ನ್ನು ಕಂಡು ಹಿಡಿಯಿರಿ" (Find Raffeisen) ಎಂಬುದಾಗಿ ವರದಿಯಲ್ಲಿ ಅಭಿಪ್ರಾಯ ನೀಡಿದರು. ಇದರರ್ಥ ಜರ್ಮನಿಯ ರೈಫೀಜಾನ್‌ನಂತೆ ಉತ್ಸಾಹ ಮತ್ತು ಶ್ರದ್ಧೆ ಉಳ್ಳವರನ್ನು ಹುಡುಕಿ, ರೈಫಿಜಾನ್ ಮಾದರಿಯ ಪತ್ತಿನ ಸಹಕಾರ ಸಂಘಗಳನ್ನು (ಗ್ರಾಮ ಬ್ಯಾಂಕ್‌ಗಳನ್ನು) ಸ್ಥಾಪಿಸಲು ಶಿಫಾರಸ್ಸು ಮಾಡಿದರು. ಅದೇ ಸಮಯದಲ್ಲಿ ಉತ್ತರ ಪ್ರದೇಶ ಸರ್ಕಾರವು ತನ್ನ ಪ್ರಾಂತದಲ್ಲಿ ಕೃಷಿ ಬ್ಯಾಂಕ್‌ಗಳನ್ನು ಸ್ಥಾಪನೆ ಮಾಡುವ ಕುರಿತು ಅಧ್ಯಯನ ಮಾಡಿ ವರದಿ ನೀಡಲು ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿಯಾಗಿದ್ದ ಡೂಪರನೆಕ್ಸ್ (Mr. Dupernex) ಇವರನ್ನು ನೇಮಿಸಿತ್ತು. ಇವರು ರೈತರ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಪೀಪಲ್ಸ್ ಬ್ಯಾಂಕ್ ಫಾರ್ ನಾರ್ದನ್ ಇಂಡಿಯಾ ಎಂಬ ಕಿರು ಪುಸ್ತಕವನ್ನು ಪ್ರಕಟಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರು. ರೈತರಿಗೆ ವ್ಯವಸಾಯದ ಸಾಲಗಳನ್ನು ನೀಡಲು ಸಾಂಸ್ಥಿಕ ವ್ಯವಸ್ಥೆಯನ್ನು ರಚಿಸಲು ಸರ್ಕಾರ ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಅಲ್ಲಲ್ಲಿ ಸಹಕಾರ ಸಂಘಗಳ ಸ್ಥಾಪನೆಯ ಪ್ರಯತ್ನಗಳು ನಡೆದವು.

ಸರ್. ಫ್ರೆಡ್ರಿಕ್ ನಿಕೋಲ್ಸನ್ ಮತ್ತು ಡೂಪರನೆಕ್ಸ್ ಇವರಿಬ್ಬರು ನೀಡಿದ್ದ ವರದಿಗಳು 1900 ರಲ್ಲಿ ಭಾರತ ಸರ್ಕಾರದ ಗಮನಕ್ಕೆ ಬಂದವು. ನಂತರ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಕುರಿತು ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಲು 1901 ರಲ್ಲಿ ಸರ್. ಎಡ್ವರ್ಡ್ ಲಾ (Sir, Edward Law) ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಭಾರತದಲ್ಲಿ ಸಹಕಾರ ಚಳವಳಿಯನ್ನು ಪ್ರೋತ್ಸಾಹಿಸುವುದು ಉಚಿತವೆಂದು ಅಭಿಪ್ರಾಯ ಪಟ್ಟು ಗ್ರಾಮೀಣ ಮತ್ತು ಪಟ್ಟಣ ಪತ್ತಿನ ಸಂಸ್ಥೆಗಳ ಸ್ಥಾಪನೆ, ಆಡಳಿತ ಮೇಲ್ವಿಚಾರಣೆ ಮತ್ತು ಕಾನೂನು ಇತ್ಯಾದಿ ಅಂಶಗಳನ್ನು ಒಳಗೊಂಡ ವರದಿಯನ್ನು ನೀಡಿತು. ಭಾರತ ಸರ್ಕಾರವು ಕ್ರಮಗಳನ್ನು ಕೈಗೊಂಡು, 1904ರ ಮಾರ್ಚ್ 25ರಂದು "ಸಹಕಾರ ಪತ್ತಿನ ಸಂಘಗಳ ಕಾಯಿದೆ" (Cooperative Credit Socities Act)ಯನ್ನು ಅಂಗೀಕರಿಸಿತು. ಈ ಕಾಯ್ದೆ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಪತ್ತಿನ ಸಂಘಗಳನ್ನು ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೃಷಿಯೇತರ ಪತ್ತಿನ ಸಂಘಗಳನ್ನು ಸ್ಥಾಪಿಸಿ ಸರಳ ಬಡ್ಡಿದರದಲ್ಲಿ ಸಾಲಗಳನ್ನು ನೀಡುವುದಕ್ಕೆ ಅವಕಾಶವಾಯಿತು. ಇದು ಭಾರತದಲ್ಲಿ ಸಹಕಾರ ಚಳುವಳಿಯು ಅಧಿಕೃತವಾಗಿ ಆರಂಭವಾದುದ್ದಕ್ಕೆ ಸಾಕ್ಷಿ ಆಗಿರುತ್ತದೆ.

**ಭಾರತದ ಸಹಕಾರ ಚಳುವಳಿಯ ಸ್ವಾತಂತ್ರ್ಯ ಪೂರ್ವದ ಪ್ರಮುಖ ಅಂಶಗಳು :**

1) 1904ರಲ್ಲಿ ಸಹಕಾರ ಪತ್ತಿನ ಸಂಘಗಳ ಕಾಯಿದೆಯ ಅಂಗೀಕಾರ ಇದರ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಜರ್ಮನಿಯ ರೈಫಿಜಾನ್ ಮಾದರಿಯ ಅನಿಯಮಿತ ಜವಾಬ್ದಾರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಹಾಗೂ ಪಟ್ಟಣ ಪ್ರದೇಶಗಳಲ್ಲಿ ಪೋಲ್ಸ್ ಡಿಲಿಟ್ಸ್ ಮಾದರಿಯ (ನಿಯಮಿತ ಅಥವಾ ಅನಿಯಮಿತ ಜವಾಬ್ದಾರಿಯ) ಪ್ರಾಥಮಿಕ ಕೃಷಿಯೇತರ ಪತ್ತಿನ ಸಂಘಗಳನ್ನು ಮಾತ್ರ ಸ್ಥಾಪಿಸಲು ಅವಕಾಶ.

ಪ್ರಾಥಮಿಕ – ಸಹಕಾರ ಸಂಘದಲ್ಲಿ ಸದಸ್ಯತ್ವ ವ್ಯಕ್ತಿಗೆ ಮಾತ್ರ

ನಿಯಮಿತ ಜವಾಬ್ದಾರಿ – ಸದಸ್ಯನ ಹೊಣೆಗಾರಿಕೆಯು ಪಾವತಿಸಿರುವ ಷೇರು ಹಣಕ್ಕೆ ಮಾತ್ರ ಸೀಮಿತ

ಅನಿಯಮಿತ ಜವಾಬ್ದಾರಿ – ಸದಸ್ಯನ ಹೊಣೆಗಾರಿಕೆಯು ಪಾವತಿಸಿರುವ ಷೇರು ಹಣಕ್ಕಿಂತ ಮೀರಿರುವುದು

ಕೃಷಿ ಪತ್ತು (ಸಾಲ) – ಬೆಳೆ ಮತ್ತು ಕೃಷಿ ಸಂಬಂಧಿತ ಸಾಲಗಳು

ಕೃಷಿಯೇತರ ಪತ್ತು (ಸಾಲ) – ವ್ಯಾಪಾರಸ್ಥರಿಗೆ, ಕುಶಲಕರ್ಮಿಗಳಿಗೆ, ಗೃಹ ನಿರ್ಮಾಣಕ್ಕೆ ಇತ್ಯಾದಿ ಉದ್ದೇಶಕ್ಕೆ ನೀಡುವ ಸಾಲಗಳು.

ಸಹಕಾರ ಸಂಘದ ಮುಖ್ಯ ಧ್ಯೇಯವು ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಾಗಿರುತ್ತದೆ. ಸಂಘವನ್ನು ಸ್ಥಾಪಿಸಲು ಕಾಯ್ದೆಯ ಪ್ರಕಾರ ಬೈಲಾ ನಿಯಮಗಳನ್ನು ಒಳಗೊಂಡ ಪ್ರಸ್ತಾವನೆಯನ್ನು, ಕಾರ್ಯವ್ಯಾಪ್ತಿಗನುಗುಣವಾಗಿ, ಸಂಬಂಧಿಸಿದ ನಿಬಂಧಕರಿಗೆ ನೀಡಬೇಕು. ನಿಬಂಧಕರು ಪರಿಶೀಲಿಸಿ, ನೊಂದಣಿ ಮಾಡಿ ಅಂಗೀಕರಿಸಿದ ಬೈಲಾ ನಿಯಮಗಳನ್ನು ಸಂಘಕ್ಕೆ ನೀಡುತ್ತಾರೆ. ಸಂಘದ ಕಾರ್ಯ ನಿರ್ವಹಣೆಯನ್ನು ಕಾಯ್ದೆ ಕಾನೂನು ಹಾಗೂ ಬೈಲಾ ನಿಯಮಗಳ ಚೌಕಟ್ಟಿನಲ್ಲಿ ನಡೆಸುವುದು.

2) 1912ರಲ್ಲಿ ಹೊಸದಾದ ಸಹಕಾರ ಸಂಘಗಳ ಕಾಯಿದೆಯ ಅಂಗೀಕಾರ. 1904ರ ಕಾಯಿದೆ ಪ್ರಕಾರ ಪ್ರಾಥಮಿಕ ಪತ್ತಿನ ಸಂಘಗಳನ್ನು ಮಾತ್ರ ಸ್ಥಾಪಿಸಲು ಅವಕಾಶವಿತ್ತು. ಕೇಂದ್ರ ಹಣಕಾಸು ಸಂಸ್ಥೆಗಳನ್ನು ಅಥವಾ ಒಕ್ಕೂಟಗಳನ್ನು (Unions) ಹಾಗೂ ಪತ್ತೇತರ ಅಂದರೆ ಗ್ರಾಹಕ, ಮಾರಾಟ, ಕೈಗಾರಿಕೆ ಇತ್ಯಾದಿ ಉದ್ದೇಶಿತ ಸಂಘಗಳನ್ನು ಸ್ಥಾಪಿಸಲು ಅವಕಾಶ ಇರಲಿಲ್ಲ, ಈ ಕಾರಣಗಳಿಂದ ಪ್ರಾಥಮಿಕ ಸಂಘಗಳಿಗೆ ಆರ್ಥಿಕ ನೆರವು ನೀಡಲು ಕೇಂದ್ರ ಬ್ಯಾಂಕ್‌ಗಳನ್ನು, ಒಕ್ಕೂಟಗಳನ್ನು, ಇತರೆ ಉದ್ದೇಶಿತ ಸಂಘಗಳನ್ನು ಸ್ಥಾಪಿಸಲು ಅವಕಾಶವಾಗುವಂತೆ 1904ರ ಕಾಯಿದೆಗೆ ವ್ಯಾಪಕ ತಿದ್ದುಪಡಿಗಳನ್ನು ಮಾಡಲು ಸರ್ಕಾರ ತೀರ್ಮಾನಿಸಿತು. ಇದರ ಪ್ರಕಾರ 1912ರಲ್ಲಿ ಹೊಸದಾದ ಸಹಕಾರ ಕಾಯಿದೆಯನ್ನು ಅಂಗೀಕರಿಸಿತು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳನ್ನು ಗ್ರಾಹಕ, ಮಾರಾಟ, ಕೈಗಾರಿಕೆ, ಸಂಸ್ಕರಣಾ ಇತ್ಯಾದಿ ಉದ್ದೇಶಿತ ಸಂಘಗಳನ್ನು ಸ್ಥಾಪಿಸಲು ಹೊಸ ಕಾನೂನಿನ ಪ್ರಕಾರ ಅವಕಾಶವಾಯಿತು. ಜೊತೆಗೆ, ಚಳವಳಿಯ ಬೆಳವಣಿಗೆಗಾಗಿ ಅನೇಕ ಕಾನೂನುಗಳನ್ನು ಅಳವಡಿಸಲಾಯಿತು. ಇದರ ಪರಿಣಾಮವಾಗಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ವಿವಿಧ ಆರ್ಥಿಕ ಚಟುವಟಿಕೆಗಳುಳ್ಳ ಸಹಕಾರ ಸಂಘಗಳು ಗ್ರಾಮ, ತಾಲ್ಲೂಕು, ಜಿಲ್ಲಾ ಮುಂತಾದ ಮಟ್ಟಗಳಲ್ಲಿ ಸ್ಥಾಪನೆಯಾದವು.

3) ಮ್ಯಾಕ್ಲಗನ್ (Macgalen) ಸಮಿತಿಯ ವರದಿ– 1915. ಸಹಕಾರ ಚಳುವಳಿಯು ಸರಿ ದಾರಿಯಲ್ಲಿ ಸಾಗಿದೆಯೆ, ಅದರ ಸಾಮರ್ಥ್ಯ ಮತ್ತು ಕೊರತೆಗಳೇನು, ಅದು ಮುನ್ನಡೆಯಲು ವಹಿಸಬೇಕಾದ ಕ್ರಮಗಳೇನು, ಇತ್ಯಾದಿ ಅಂಶಗಳ ಕುರಿತು ಅಧ್ಯಯನ ಮಾಡಿ ವರದಿ ನೀಡಲು ಭಾರತ ಸರ್ಕಾರವು ಸರ್. ಇ.ಡಿ.ಮ್ಯಾಕ್ಲಗನ್ ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು 1914ರಲ್ಲಿ ನೇಮಿಸಿತು. ಈ ಸಮಿತಿಯು 1915ರಲ್ಲಿ ವರದಿಯನ್ನು ನೀಡಿತು. ಸಂಘಗಳನ್ನು ಆತುರ ಮಾಡದೆ ಎಚ್ಚರಿಕೆಯಿಂದ ಸ್ಥಾಪಿಸುವುದು, ಸಹಕಾರ ತತ್ವಗಳ ಪಾಲನೆ, ಪ್ರಜಾಪ್ರಭುತ್ವ ವಿಧಾನದ ಆಡಳಿತ, ಪಾರದರ್ಶಕತೆ ಮತ್ತು ನೈತಿಕತೆ ಪಾಲನೆ, ಗುಣಮಟ್ಟದ ಸಾಲ ನೀಡಿಕೆ ಮತ್ತು ವಸೂಲಾತಿ, ಮೀಸಲು ನಿಧಿಯ ಸೃಷ್ಟಿ, ಅಲ್ಪಾವಧಿ ಕೃಷಿ ಪತ್ತಿನ ವ್ಯವಸ್ಥೆಯ ಜೊತೆಗೆ ದೀರ್ಘಾವಧಿ ಸಾಲಗಳನ್ನು ನೀಡಲು ಭೂ ಅಡಮಾನ ಬ್ಯಾಂಕ್‌ಗಳ ಸ್ಥಾಪನೆ, ಇತ್ಯಾದಿ ಚಳುವಳಿಯ ಆರೋಗ್ಯಕರ ಬೆಳವಣಿಗೆಗೆ ಅನೇಕ ಶಿಫಾರಸ್ಸುಗಳನ್ನು ಮಾಡಿತು. ಆದರೆ, ಸರ್ಕಾರವು ಶಿಫಾರಸ್ಸುಗಳ ಅನುಷ್ಠಾನಕ್ಕೆ ಆದ್ಯತೆ ನೀಡಲಿಲ್ಲ. ಹೀಗಾಗಿ ಗುಣಮಟ್ಟಕ್ಕಿಂತ ಸಂಘಗಳ ಸ್ಥಾಪನೆ ಸಂಖ್ಯೆ ಜಾಸ್ತಿಯಾಯಿತು. 1919ರ ವೇಳೆಗೆ ಒಟ್ಟು 28,000, ಸಂಘಗಳು 11 ಲಕ್ಷ ಸದಸ್ಯರು ಹಾಗೂ 15.00 ಕೋಟಿ ದುಡಿಯುವ ಬಂಡವಾಳ ಪ್ರಗತಿಯಾಯಿತು.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1) ಪತ್ತಿನ ಸಹಕಾರ ಸಂಘದ ಸಂಪನ್ಮೂಲಗಳು ................**

a) ಷೇರು ಬಂಡವಾಳ

b) ನಿಧಿಗಳು, ಠೇವಣಿಗಳು

c) ಪಡೆದ ಸಾಲಗಳು

d) ಮೇಲಿನ ಮೂರು ಆಗಿರುತ್ತವೆ.

**2) ಪತ್ತಿನ ಸಹಕಾರ ಸಂಘಗಳ ಪ್ರಮುಖ ಆಸ್ತಿ**

a) ನಗದು/ಬ್ಯಾಂಕ್ ಶಿಲ್ಕು

b) ಹೂಡಿಕೆಗಳು

c) ಸಾಲಗಳು ಮತ್ತು ಮುಂಗಡಗಳು

d) ಚರ ಮತ್ತು ಸ್ಥಿರ ಆಸ್ತಿಗಳು

**3) ನೌಕರರ ಪತ್ತಿನ ಸಹಕಾರ ಸಂಘಗಳು ಅತಿ ಹೆಚ್ಚಿಗೆ ................ ಸಾಲ ವಿತರಿಸುತ್ತವೆ**

a) ಚಿನ್ನಾಭರಣ ಸಾಲ

b) ವಾಹನ ಸಾಲ

c) ವೇತನಾಧಾರಿತ ಸಾಲ

d) ಗೃಹ ನಿರ್ಮಾಣ ಸಾಲ

**4) ಕರ್ನಾಟಕ ಪತ್ತಿನ ಸಹಕಾರ ಸಂಘಗಳ ಮಹಾಮಂಡಲ ................ ಚಟುವಟಿಕೆ ನಡೆಸುತ್ತದೆ.**

a) ಸದಸ್ಯ ಸಂಘಗಳ ಮೂಲಕ ಸಹಕಾರ ಶಿಕ್ಷಣ, ಪ್ರಚಾರ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತವೆ.

b) ಸದಸ್ಯ ಸಂಘಗಳಿಗೆ ಇ–ಸ್ಟಾಂಪ್ ಪೇಪರ್ ಮಾರಾಟ ಕೇಂದ್ರ ಸ್ಥಾಪನೆಗೆ ಸಹಕರಿಸುತ್ತದೆ.

c) ಮೇಲಿನ (ಎ) ಮತ್ತು (ಬಿ)

d) ಮೇಲಿನ ಮೂರು ಆಗಿರುವುದಿಲ್ಲ.

**5) ಪಟ್ಟಣ ಸಹಕಾರ ಬ್ಯಾಂಕುಗಳು ................**

a) ಸಹಕಾರ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟಿದೆ.

b) ಭಾರತೀಯ ರಿಸರ್ವ್ ಬ್ಯಾಂಕ್ ನಿಯಂತ್ರಣಕ್ಕೆ ಒಳಪಟ್ಟಿದೆ.

c) ಮೇಲಿನ (ಎ) ಮತ್ತು (ಬಿ)

d) ಮೇಲಿನ ಮೂರು ಆಗಿರುವುದಿಲ್ಲ.

**6) ಪಟ್ಟಣ ಸಹಕಾರ ಬ್ಯಾಂಕ್‌ಗಳ ಪ್ರಮುಖ ಸಂಪನ್ಮೂಲ**

a) ಷೇರು ಬಂಡವಾಳ

b) ಠೇವಣಿಗಳು

c) ಪಡೆದ ಸಾಲಗಳು

d) ನಿಧಿಗಳು

**7) ಪಟ್ಟಣ ಸಹಕಾರ ಬ್ಯಾಂಕುಗಳು ................ ಪರಿವೀಕ್ಷಣೆಗೆ ಒಳಪಟ್ಟಿದೆ.**

a) ನಬಾರ್ಡ್

b) ಭಾರತೀಯ ರಿಸರ್ವ್ ಬ್ಯಾಂಕ್

c) ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಲ

d) ಮೇಲಿನ ಮೂರು ಆಗಿರುವುದಿಲ್ಲ.

**8) ಪಟ್ಟಣ ಬ್ಯಾಂಕ್‌ಗಳ ಉತ್ತಮ ಕಾರ್ಯಾಚರಣೆಗೆ ಸಲಹೆ ನೀಡಲು ನೇಮಕವಾದ ಸಮಿತಿ**

a) ರಾಮ ರಾವ್ ಸಮಿತಿ

b) ಮಾಧವ ರಾವ್ ಸಮಿತಿ

c) ರಂಗರಾವ್ ಸಮಿತಿ

d) ಮೇಲಿನ ಮೂರು ಆಗಿರುವುದಿಲ್ಲ.

**9) ಪಟ್ಟಣ ಸಹಕಾರ ಬ್ಯಾಂಕ್‌ಗಳನ್ನು ಪರಿವೀಕ್ಷಣೆ ನಂತರ ಶ್ರೇಣೀಕರಿಸಲು ಅನುಸರಿಸುವ ಮಾನದಂಡಗಳು**

a) ಅಗತ್ಯತೆಯಷ್ಟು ಬಂಡವಾಳ ಆಸ್ತಿ ಗುಣಮಟ್ಟ

b) ವ್ಯವಸ್ಥಾಪನಾ ಮಟ್ಟ, ಗಳಿಕೆ, ದ್ರವ್ಯ ಆಸ್ತಿ ನಿರ್ವಹಣೆ

c) ವ್ಯವಸ್ಥೆಗಳ ನಿಯಂತ್ರಣ, ಅನುಪಾಲನೆ (ಪರಿವೀಕ್ಷಣೆ)

d) ಮೇಲಿನ ಮೂರು ಆಗಿರುತ್ತದೆ.

**10) ಪಟ್ಟಣ ಸಹಕಾರ ಬ್ಯಾಂಕ್‌ಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿಗಧಿಪಡಿಸಿರುವ ಕನಿಷ್ಠ ಸಿ.ಆರ್.ಎ.ಆರ್. (ತೂಕ ಸಹಿತ ಆಸ್ತಿಗೆ ಬಂಡವಾಳ ಅನುಪಾತ)**

a) 7 b) 9

c) 14 d) ಮೇಲಿನ ಮೂರು ಆಗಿರುವುದಿಲ್ಲ.

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

**1 -C , 2 -D , 3 –D , 4 –C , 5 – C, 6 – B, 7 – D, 8 – C, 9 –B , 10 – A**